ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಜೂನ್ 11, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 28 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

THE TEAM ACADEMY
Davangere & Shivamogga
LONG TERM FOR NEET & IIT - 2024
CLASSES STARTS FROM 15TH JUNE 2023




For Davangere : 9035109411, 9538546758
For Shivamogga : 9902303441, 9963505593

## ಕಾಂಗ್ರೆಸ್‌ನಿಂದಲೂ ಪರ್ಸೆಂಟೇಜ್

### ಎಲ್‌ಒಸಿ ಬಿಡುಗಡೆ ಮಾಡಲು ಹಣಕ್ಕೆ ಬೇಡಿಕೆ: ಕುಮಾರಸ್ವಾಮಿ

ಬೆಂಗಳೂರು, ಜೂ. 10 - ಹಿಂದಿನ ಬಿಜೆಪಿ ಸರ್ಕಾರದಲ್ಲಿ ನಡೆದಿದ್ದ ಕಾಮಗಾರಿಗಳಿಗೆ ಎಲ್‌ಒಸಿ ಕೊಡಲು ರಾಜ್ಯ ಕಾಂಗ್ರೆಸ್ ಸರ್ಕಾರ ಪರ್ಸಂಟೇಜ್ ನಿಗದಿ ಮಾಡಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಬೆಂಗಳೂರು ನಗರದ ಮುಖಂಡರ ಆತ್ಮಾವಲೋಕನ ಸಭೆಯಲ್ಲಿ ಭಾಗಿಯಾಗುವ ಮುನ್ನ ಅವರು ಮಾಧ್ಯಮಗಳ ಜತೆ ಮಾತನಾಡಿದರು.

ಹಿಂದಿನ ಬಿಜೆಪಿ ಸರ್ಕಾರವನ್ನು 40 ಪರ್ಸೆಂಟ್ ಎಂದು ಟೀಕಿಸುತ್ತಿದ್ದ ಕಾಂಗ್ರೆಸ್, ಈಗ ಅಧಿಕಾರಕ್ಕೆ ಬಂದ ಮೇಲೆ ಪ್ರತಿಯೊಂದಕ್ಕೂ ದರ ನಿಗದಿ ಮಾಡುತ್ತಿದೆ. ಹಿಂದಿನ ಸರ್ಕಾರದಲ್ಲಿ ಕೈಗೊಳ್ಳಲಾಗಿದ್ದ ಕಾಮಗಾರಿಗಳಿಗೆ ಎಲ್.ಓ.ಸಿ. ಕೊಡುವುದಕ್ಕೆ ಈ ಸರ್ಕಾರದಲ್ಲಿ 5% ನಿಗದಿ ಮಾಡಿದ್ದಾರೆ. ಇಂಥವರು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ ಎಂದು ಮಾಜಿ ಮುಖ್ಯಮಂತ್ರಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಸರ್ಕಾರದಲ್ಲಿ ಪ್ರಾರಂಭಿಕ ಹಂತದಲ್ಲಿಯೇ ಅಧಿಕಾರಿಗಳ ಸಭೆ ನಡೆದಿದೆ. ಆ ಸಭೆಯಲ್ಲಿ ಅಧಿಕಾರಿಗಳಿಗೆ ಯಾವ ರೀತಿ ಪಾಠ ಮಾಡಿದ್ದಾರೆ ಇವರು ಎನ್ನುವ ಮಾಹಿತಿ ನನಗಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನಾವು ಹೇಳಿದಂತೆ ಮಾತ್ರ ಕೇಳಬೇಕು ಎಂದು ಫರ್ಮಾನು ಹೊರಡಿಸಿದ್ದಾರೆ. ಇದರ ಅರ್ಥ ಏನೆಂದರೆ, ನಮಗೆ ಬೇಕಾದ ಹಾಗೆ ಕೆಲಸ ಮಾಡಿ, ಇಲ್ಲವೇ ಹೊರಡಿ ಎನ್ನುವುದೇ ಈ ಫರ್ಮಾನಿನ ಒಳಾರ್ಥ ಎಂದು ಕುಮಾರಸ್ವಾಮಿ ಅವರು ದೂರಿದರು.

ಪ್ರಾರಂಭಿಕ ಹಂತದಲ್ಲಿ ಕಾಂಗ್ರೆಸ್ ಸರ್ಕಾರ ಕೆಲವು ನಿರ್ಧಾರ ತೆಗೆದುಕೊಂಡಿದೆ. (3ನೇ ಪುಟಕ್ಕೆ)

## ಇಂದಿನಿಂದ ಮಹಿಳೆಯರ ಉಚಿತ ಪ್ರಯಾಣ

### ಜಿಲ್ಲೆಯಲ್ಲಿ ಶಕ್ತಿ ಯೋಜನೆಗೆ ಇಂದು ಎಸ್ಸೆಸ್ಸೆಂ ಚಾಲನೆ, ಸಿಂಗಾರಗೊಂಡಿವೆ ಸಾರಿಗೆ ಬಸ್‌ಗಳು

ದಾವಣಗೆರೆ, ಜು.10- ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ರಾಜ್ಯಾದ್ಯಂತ ಮಹಿಳೆಯರಿಗೆ ಉಚಿತವಾಗಿ ಪ್ರಯಾಣ ಕಲ್ಪಿಸುವ 'ಶಕ್ತಿ' ಯೋಜನೆಗೆ ಇಂದು 12.30ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ.



ಮಹಿಳಾ ಪ್ರಯಾಣಿಕರಿಗೆ ಶೂನ್ಯದರದ ಟಿಕೆಟ್ ನೀಡುವ ಮೂಲಕ ಈ ಯೋಜನೆಗೆ ಚಾಲನೆ ದೊರೆಯಲಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಹಾನಗರ ಪಾಲಿಕೆ ಮಹಾಪೌರರು, ಉಪಮಹಾಪೌರರು, ಗಣ್ಯರು, ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

'ಶಕ್ತಿ' ಯೋಜನೆಗೆ ಚಾಲನೆ ನೀಡುವ ವೇದಿಕೆ ಸಮಾರಂಭಕ್ಕಾಗಿ ನಗರದ ತಾತ್ಕಾಲಿಕ ಸರ್ಕಾರಿ ಬಸ್ ನಿಲ್ದಾಣದಲ್ಲಿ ಪೆಂಡಾಲ್ ಹಾಕಿ, ವೇದಿಕೆ ನಿರ್ಮಿಸಿ, ಕುರ್ಚಿ ವ್ಯವಸ್ಥೆ ಮಾಡಲಾಗಿದೆ. ಶಕ್ತಿ ಯೋಜನೆ ಚಾಲನೆಗಾಗಿ ಸಾರಿಗೆ ಸಂಸ್ಥೆ ಬಸ್‌ಗಳನ್ನು ಸ್ವಚ್ಛಗೊಳಿಸಿ, ಹೂಗಳಿಂದ ಸಿಂಗರಿಸಲಾಗುತ್ತಿದೆ. ನಿಲ್ದಾಣದ ಬಳಿ ಅಲ್ಲಲ್ಲಿ ಶಕ್ತಿ ಯೋಜನೆಯ ಬ್ಯಾನರ್, ಫ್ಲೆಕ್ಸ್‌ಗಳನ್ನು ಅಳವಡಿಸಿ ಯೋಜನೆಯ ಪ್ರಚಾರ ಮಾಡಲಾಗುತ್ತಿದೆ.

ಜಿಲ್ಲಾ ಮಟ್ಟದಲ್ಲಿ ಶಕ್ತಿ ಯೋಜನೆಗೆ ಚಾಲನೆ ನೀಡಿದ ಬಳಿಕ ಮಧ್ಯಾಹ್ನ 1ಗಂಟೆ ಬಳಿಕ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗುವುದು. ದಾವಣಗೆರೆ ವಿಭಾಗದಲ್ಲಿ ಒಟ್ಟು 368 ಬಸ್ ಮಾರ್ಗಗಳಿದ್ದು ಇವುಗಳಲ್ಲಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ವಿಲ್ಲದ 62 ಬಸ್ ಮಾರ್ಗಗಳನ್ನು ಹೊರತು ಪಡಿಸಿ ಉಳಿದ ಎಲ್ಲ 306 ಮಾರ್ಗಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಮಾಡಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಸಿ.ಇ. ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

ಶಕ್ತಿ ಯೋಜನೆಗೆ ಚಾಲನೆ ನೀಡುವ ಕಾರ್ಯಕ್ರಮದ ನಂತರ ಸಚಿವರು ನೂತನವಾಗಿ ನಿರ್ಮಾಣಗೊಳ್ಳುತ್ತಿರುವ ಬಸ್ ನಿಲ್ದಾಣಕ್ಕೂ ಭೇಟಿ ನೀಡಿ ಪರಿಶೀಲಿಸುವ ಸಾಧ್ಯತೆ ಇದೆ.

## ಸೇಡಿನ ರಾಜಕೀಯ ಎದುರಿಸಲು ಬಿಜೆಪಿಯಿಂದ ಸಹಾಯವಾಣಿ ಆರಂಭ

ಬೆಂಗಳೂರು, ಜೂ. 10 – ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ಕಾರ್ಯಕರ್ತರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ಹೇಳಿರುವ ರಾಜ್ಯ ಬಿಜೆಪಿ ಘಟಕ, ಇಂಥವರಿಗೆ ನೆರವಾಗಲು ಸಹಾಯವಾಣಿ ಸಂಖ್ಯೆಯೊಂದನ್ನು ಆರಂಭಿಸಿದೆ.

ಕಾಂಗ್ರೆಸ್ ಸರ್ಕಾರದ ಸೇಡಿನ ರಾಜಕೀಯದ ವಿರುದ್ಧ ಹೋರಾಟ ನಡೆಸಲು 1800 309 1907 ಸಂಖ್ಯೆಯ ಸಹಾಯವಾಣಿ ಆರಂಭಿಸಲಾಗಿದೆ ಎಂದು ಬೆಂಗಳೂರು ದಕ್ಷಿಣ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಕಾರ್ಯಕರ್ತರು ಪೊಲೀಸ್ ಪ್ರಕರಣಗಳನ್ನು ಎದುರಿಸಲು ಕಾನೂನು ನೆರವು ನೀಡಲಾಗುವುದು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪ್ರತಿಪಕ್ಷಗಳ ದನಿ ದಮನಿಸಲು, ವಿಶೇಷವಾಗಿ ಬಿಜೆಪಿ ಕಾರ್ಯಕರ್ತರ ದನಿ ದಮನಕ್ಕೆ ಯತ್ನ ನಡೆಸಲಾಗುತ್ತಿದೆ ಎಂದವರು ಆರೋಪಿಸಿದರು.

## ಶಸ್ತ್ರಗಳನ್ನು ವಾಪಸ್ ಕೊಡಲು ಬಿಜೆಪಿ ಸಚಿವರಿಂದ ಪೆಟ್ಟಿಗೆ

ಇಂಫಾಲ್, ಜೂ. 10 – ಭದ್ರತಾ ಸಿಬ್ಬಂದಿಯಿಂದ ಕಸಿಯಲಾದ ಶಸ್ತ್ರಗಳನ್ನು ವಾಪಸ್ ನೀಡುವ ಸಲುವಾಗಿ ಮಣಿಪುರದ ಬಿಜೆಪಿ ಶಾಸಕರೊಬ್ಬರು ಪೆಟ್ಟಿಗೆಯೊಂದನ್ನು ಇರಿಸಿದ್ದಾರೆ. ಜನರು ಅನಾಮಿಕವಾಗಿ ಶಸ್ತ್ರಗಳನ್ನು ಮರಳಿಸಬಹುದು ಎಂದು ತಿಳಿಸಲಾಗಿದೆ.

ಇಂಫಾಲ್ ಪೂರ್ವದ ಶಾಸಕ ಎಲ್. ಸುಸಿಂದ್ರೊ ಮೀಟಿ ಅವರು ತಮ್ಮ ಮನೆಯ ಹೊರಗೆ ಪೆಟ್ಟಿಗೆಯೊಂದನ್ನು ಇರಿಸಿದ್ದು, 'ಕಸಿಯಲಾದ ಶಸ್ತ್ರಗಳನ್ನು ಇಲ್ಲಿ ಹಾಕಿ' ಎಂಬ ಫಲಕ ಅಳವಡಿಸಿದ್ದಾರೆ.

ಇಲ್ಲಿ ಶಸ್ತ್ರಗಳನ್ನು ಹಾಕಿ ಹೋದವರಿಗೆ ಯಾವುದೇ ಪ್ರಶ್ನೆಗಳನ್ನು ಕೇಳುವುದಿಲ್ಲ ಎಂದು ಶಾಸಕರು ಹೇಳಿದ್ದಾರೆ. ನಂತರದಲ್ಲಿ ಒಂದೆರಡು ಆಟೋಮ್ಯಾಟಿಕ್ ರೈಫಲ್ ಹಾಗೂ ಕೆಲ ಗುಂಡುಗಳನ್ನು ಡಬ್ಬಿಯಲ್ಲಿ ಹಾಕಲಾಗಿದೆ.

ಕಳೆದ ಮೇ ತಿಂಗಳಲ್ಲಿ ರಾಜ್ಯದಲ್ಲಿ ಹಿಂಸಾಚಾರ ನಡೆದಾಗ ದೊಡ್ಡ ಸಂಖ್ಯೆಯಲ್ಲಿ (3ನೇ ಪುಟಕ್ಕೆ)

## ಸಾಧಕರಲ್ಲಿ ಶೇ.40 ರಷ್ಟು ಇಂಜಿನಿಯರ್‌ಗಳು

### ಬಿಐಇಟಿಯಲ್ಲಿ ನಡೆದ ಪದವಿ ದಿನಾಚರಣೆಯಲ್ಲಿ ಡಿಸಿಪಿ ಯತೀಶ್ ಚಂದ್ರ

ದಾವಣಗೆರೆ ಜೂ. 10 - ದೊಡ್ಡ ಸಾಧನೆ ಮಾಡುತ್ತಿರುವವರಲ್ಲಿ ಇಂಜಿನಿಯರ್‌ಗಳ ಪಾಲು ಶೇ.40ರಷ್ಟಿದೆ. ನಾಗರಿಕ ಸೇವೆಗಳೂ ಸೇರಿದಂತೆ, ಎಲ್ಲ ವಲಯಗಳಲ್ಲಿ ಇಂಜಿನಿಯರ್ ಹಿನ್ನೆಲೆಯ ಸಾಧಕರಿದ್ದಾರೆ ಎಂದು ಬೆಂಗಳೂರಿನ ನಗರ ಪೊಲೀಸ್ ಅಪರಾಧ ವಿಭಾಗದ ಡಿ.ಸಿ.ಪಿ. ಜಿ.ಹೆಚ್. ಯತೀಶ್ ಚಂದ್ರ ತಿಳಿಸಿದರು.



ನಗರದ ಬಿಐಇಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 40ನೇ ಪದವಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಮಸ್ಯೆ ಬಗೆಹರಿಸುವುದನ್ನು ಕಲಿಸಲಾಗುತ್ತದೆ. ಸಮಸ್ಯೆ ಬಗೆಹರಿಸುವ ಕಲೆ ಎಲ್ಲ ವಲಯಗಳಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಹೇಳಿದರು.

ಯಶಸ್ಸು ಗಳಿಸಬೇಕಾದರೆ ಚಿಕ್ಕ ವಯಸ್ಸಿನಲ್ಲೇ ಉದ್ಯಮಶೀಲತೆಯ ಗುಣ ಬೆಳೆಸಿಕೊಳ್ಳಬೇಕು. ಉದ್ಯೋಗಿಯಾಗುವ ಮನೋಭಾವ ಬಿಟ್ಟು, ಉದ್ಯಮ ಆರಂಭಿಸುವ ಸ್ಫೂರ್ತಿ ಹೊಂದಬೇಕು ಎಂದು ಕಿವಿಮಾತು ಹೇಳಿದರು.

ಕೆಲ ಯುವ ಇಂಜಿನಿಯರ್‌ಗಳಲ್ಲಿ ಉತ್ತಮ ಯೋಜನೆಗಳಿರುತ್ತವೆ. ತಾವೇ ಕೈಗಾರಿಕೆ ಆರಂಭಿಸಿ ಯೋಜನೆಗಳನ್ನು ತಾವೇ ಕಾರ್ಯಗತಗೊಳಿಸಿದಲ್ಲಿ ಉತ್ತಮ ಆದಾಯ (3ನೇ ಪುಟಕ್ಕೆ)

### ಯಶಸ್ಸಿನ ಪಂಚ ಸೂತ್ರಗಳು

**ಮಾನಸಿಕ ಹಾಗೂ ದೈಹಿಕ ಆರೋಗ್ಯದ ಕಡೆ ಹೆಚ್ಚಿನ ಕಾಳಜಿ, ಕುಟುಂಬದಲ್ಲಿ ಉತ್ತಮ ಸಂಬಂಧ, ಜೀವನದಲ್ಲಿ ಹೆಚ್ಚು ಸ್ವಾತಂತ್ರ್ಯ ನೀಡುವಷ್ಟು ಆದಾಯ, ಉತ್ತಮ ಸ್ನೇಹಿತರು ಹಾಗೂ ಹವ್ಯಾಸಗಳು ಜೀವನದಲ್ಲಿ ಯಶಸ್ಸು ತರುತ್ತವೆ ಎಂದು ಜಿ.ಹೆಚ್. ಯತೀಶ್ ಚಂದ್ರ ಹೇಳಿದರು. ಯಶಸ್ಸು ಎಂಬುದನ್ನು ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನಿಸುತ್ತಾರೆ. ವಯಸ್ಸು ಕಳೆದಂತೆ ಯಶಸ್ಸಿನ ಗುರಿಗಳೂ ಬೇರೆಯಾಗುತ್ತವೆ. ಆದರೆ, ಯಶಸ್ಸಿನ ಕಡೆ ನಿರಂತರ ಪರಿಶ್ರಮದಿಂದ ಜೀವನದಲ್ಲಿ ಮುನ್ನಡೆ ಸಾಧ್ಯ ಎಂದವರು ತಿಳಿಸಿದರು.**

## ಆರೆಸ್ಸೆಸ್ ಅಂಗ ಸಂಸ್ಥೆಯಿಂದ ಗರ್ಭ ಸಂಸ್ಕಾರ ಯೋಜನೆ

ನವದೆಹಲಿ, ಜೂ. 10 – ಗರ್ಭಿಣಿಯರು ಭಗವದ್ ಗೀತೆ ಹಾಗೂ ರಾಮಾಯಣಗಳನ್ನು ಓದಲು ಮತ್ತು ಯೋಗಾಭ್ಯಾಸ ಮಾಡಲು 'ಗರ್ಭ ಸಂಸ್ಕಾರ' ಅಭಿಯಾನಕ್ಕೆ ಚಾಲನೆ ನೀಡುವುದಾಗಿ ಆರ್.ಎಸ್.ಎಸ್. ಅಂಗ ಸಂಸ್ಥೆಯಾದ ಸಂವರ್ಧಿನೀ ನ್ಯಾಸ ತಿಳಿಸಿದೆ.

ಗರ್ಭ ಸಂಸ್ಕಾರದ ಮೂಲಕ ಗರ್ಭದಲ್ಲಿರುವ ಮಕ್ಕಳಿಗೆ ಸಂಸ್ಕಾರ ಕಲಿಸಲು ಸಾಧ್ಯವಾಗಲಿದೆ. ಭಗವದ್ ಗೀತೆ, ರಾಮಾಯಣ, ಸಂಸ್ಕೃತ ಮಂತ್ರಗಳು ಹಾಗೂ ಯೋಗ ಕಲಿಸಲಾಗುವುದು. ಇದರಿಂದಾಗಿ ಮಕ್ಕಳು ಸಂಸ್ಕಾರವಂತ ಹಾಗೂ ದೇಶಭಕ್ತರಾಗಲಿದ್ದಾರೆ ಎಂದು ಸಂಘಟನೆ ಹೇಳಿದೆ.

ದೇಶಾದ್ಯಂತ ವೈದ್ಯರ ಜೊತೆಗೂಡಿ ಈ ಕಾರ್ಯಕ್ರಮ ಜಾರಿಗೆ ತರಲಾಗುವುದು. ಆರೋಗ್ಯಕರ ಆಹಾರ ಸೇವನೆ, ಉತ್ತಮ ಪರಿಸರ ಒದಗಿಸುವ ಬಗ್ಗೆಯೂ ತಿಳಿಸಲಾಗುವುದು ಎಂದು ಸಂಘಟನೆಯ ಪದಾಧಿಕಾರಿಗಳು ಹೇಳಿದ್ದಾರೆ.

ಈ ಯೋಜನೆಗಾಗಿ ದೇಶವನ್ನು ಐದು ಪ್ರಾಂತ್ಯಗಳನ್ನಾಗಿ ವಿಭಜಿಸಲಾಗಿದೆ. ಪ್ರತಿ ಪ್ರಾಂತ್ಯದಲ್ಲಿ 10 ವೈದ್ಯರು ಯೋಜನೆಯ ನೇತೃತ್ವ ವಹಿಸಲಿದ್ದಾರೆ. ಆರಂಭದಲ್ಲಿ ಪ್ರತಿ ವೈದ್ಯರು 20 ಗರ್ಭಿಣಿಯರಿಗೆ ಗರ್ಭ ಸಂಸ್ಕಾರ ಕಲಿಸಲಿದ್ದಾರೆ ಎಂದು ಸಂಘಟನೆ ಹೇಳಿದೆ.

**ವಿದ್ಯಾರ್ಥಿಗಳೇ ನಿಮ್ಮ ಮೆದುಳಿನ ಶಕ್ತಿಯನ್ನು ಅರಿತು ಹೆಚ್ಚು ಅಂಕ ಗಳಿಸಿ**



ಪ್ರಪಂಚದಲ್ಲಿ 95% ವಿದ್ಯಾರ್ಥಿಗಳು ಅವರ ಮೆದುಳಿನ ಎಡ ಭಾಗವನ್ನು ಹೆಚ್ಚು ಬಳಸುತ್ತಾರೆ. ಆದರೆ 5% ವಿದ್ಯಾರ್ಥಿಗಳು ಮೆದುಳಿನ ಬಲ ಭಾಗವನ್ನು ಹೆಚ್ಚು ಹೆಚ್ಚು ಬಳಸಿಕೊಂಡು 90%ಕ್ಕೂ ಅಧಿಕ ಅಂಕ ಗಳಿಸುತ್ತಾರೆ. ಮೆದುಳಿನ ಬಲ ಭಾಗವನ್ನು ಹೆಚ್ಚು ಬಳಸಿಕೊಂಡಂತೆಲ್ಲಾ ನಮ್ಮ ನೆನಪಿನ ಶಕ್ತಿ ಮತ್ತು ಕ್ರಿಯೇಟಿವಿಟಿ ಜಾಸ್ತಿಯಾಗುತ್ತಾ ಹೋಗುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಖ್ಯಾತ ತರಬೇತುದಾರರಾದ ಎಸ್.ಪ್ರಶಾಂತ್‌ರವರು, ಮೆದುಳಿನ ಇನ್ನೊಂದು ಭಾಗವನ್ನು ಬಳಸುವುದು ಹೇಗೆ ಮತ್ತು ಹೆಚ್ಚು ಅಂಕ ಗಳಿಸುವುದು ಹೇಗೆ ಎಂದು ತಿಳಿಯಲು ಮೆಮೋರಿ ಸೆಮಿನಾರ್‌ನಲ್ಲಿ ನೀವು ತಪ್ಪದೇ ಪೋಷಕರೊಂದಿಗೆ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಿ.

**ಉಚಿತ ಪ್ರವೇಶ**

ಇಂದು (ಭಾನುವಾರ) 11–06–2023
1ನೇ ಸೆಮಿನಾರ್ ಬೆಳಿಗ್ಗೆ 11 ರಿಂದ 12.30
2ನೇ ಸೆಮಿನಾರ್ ಸಂಜೆ 4.30 ರಿಂದ 6.00
3ನೇ ಸೆಮಿನಾರ್ ಸಂಜೆ 6.30 ರಿಂದ 8.00
(ಯಾವುದಾದರು ಒಂದು ಸೆಮಿನಾರ್‌ನಲ್ಲಿ ಭಾಗವಹಿಸಿ)
ಸ್ಥಳ: ರಂಗ ಮಹಲ್, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ.

**ಮೆದುಳಿನ ಅದ್ಭುತ ಶಕ್ತಿಯ ಪ್ರದರ್ಶನ ನೋಡಲು ಮರೆಯದಿರಿ.**

## ಪೆಟ್ರೋಲ್ ಬೆಲೆ ಇಳಿಕೆಗೆ ನಿರ್ಧಾರ : ಪುರಿ

ನವದೆಹಲಿ, ಜೂ. 10 – ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಸ್ಥಿರವಾದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ಇಳಿಸುವ ಬಗ್ಗೆ ಕಂಪನಿಗಳು ನಿರ್ಧಾರ ತೆಗೆದುಕೊಳ್ಳಲಿವೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಏಪ್ರಿಲ್ 2022ರ ನಂತರ ತೈಲ ಬೆಲೆ ಏರದಂತೆ ಕೇಂದ್ರ ಸರ್ಕಾರ ಕ್ರಮ ತೆಗೆದುಕೊಂಡಿದೆ. ಗ್ರಾಹಕರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಪುರಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇಳಿಕೆಯ ಕುರಿತು ಹೇಳಿಕೆ ನೀಡುವ ಪರಿಸ್ಥಿತಿಯಲ್ಲಿ ನಾನಿಲ್ಲ. ಪರಿಸ್ಥಿತಿ ಮುಂದುವರೆದಂತೆ ಈ ಬಗ್ಗೆ ನಿರ್ಧರಿಸಲಾಗುವುದು ಎಂದರು. ಕಳೆದ ಚತುರ್ಥದಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿವೆ. ಅವುಗಳು ತಮಗಾದ ನಷ್ಟವನ್ನು ಸ್ವಲ್ಪ ಸರಿದೂಗಿಸಿಕೊಂಡಿವೆ. ಅವು ಉತ್ತಮ ಕಾರ್ಪೊರೇಟ್ ಸಂಸ್ಥೆಗಳಾಗಿದ್ದು, ಸೂಕ್ತ ನಿರ್ಧಾರ ತೆಗೆದುಕೊಳ್ಳಲಿವೆ ಎಂದು ಸಚಿವರು ತಿಳಿಸಿದ್ದಾರೆ.

## ಎನ್.ಸಿ.ಪಿ. ಕಾರ್ಯಾಧ್ಯಕ್ಷರಾಗಿ ಪ್ರಫುಲ್, ಸುಪ್ರಿಯ

'ನವದೆಹಲಿ, ಜೂ. 10 – ಪ್ರಫುಲ್ ಪಟೇಲ್ ಹಾಗೂ ಸುಪ್ರಿಯ ಸುಲೆ ಅವರನ್ನು ಎನ್.ಸಿ.ಪಿ.ಯ ಕಾರ್ಯಾಧ್ಯಕ್ಷರಾಗಿ ನೇಮಿಸುವುದಾಗಿ ಪಕ್ಷದ ಅಧ್ಯಕ್ಷ ಶರದ್ ಪವಾರ್ ಘೋಷಿಸಿದ್ದಾರೆ. ಇದರಿಂದಾಗಿ ಬಂಡಾಯ ಪ್ರವೃತ್ತಿ ಹೊಂದಿದ್ದ ಅಜಿತ್ ಪವಾರ್ ಅವರನ್ನು ಮೂಲೆಗುಂಪು ಮಾಡಲಾಗಿದೆ.

ಎನ್.ಸಿ.ಪಿ.ಯ ಸ್ಥಾಪನೆಯ 24ನೇ ವರ್ಷಾಚರಣೆ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಪವಾರ್ ಈ ಘೋಷಣೆ ಮಾಡಿದ್ದಾರೆ. ಅಜಿತ್ ಪವಾರ್ ಅವರು ಈ ಹಿಂದೆ 2019ರಲ್ಲಿ ಪಕ್ಷದ (3ನೇ ಪುಟಕ್ಕೆ)

## ತಿಂಡಿ ಸೇವಿಸದೆ ಕಾಲೇಜಿಗೆ ಬಂದರೆ ಏಕಾಗ್ರತೆ ಬಾರದು: ಡಾ.ಪ್ರಭಾ

ದಾವಣಗೆರೆ, ಜೂ. 10- ಶಿಸ್ತು, ಪ್ರಾಮಾಣಿಕತೆ, ಆತ್ಮವಿಶ್ವಾಸ, ಕರುಣೆ ಮೊದಲಾದ ಮೌಲ್ಯಗಳು ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯ ಎಂದು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಎವಿ ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕಂಜರ ಭಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬರೂ ತಂತಮ್ಮ ಭವಿಷ್ಯದ ಬಗ್ಗೆ ಆಲೋಚಿಸಬೇಕು. ತಿಂಡಿ ಸೇವಿಸದೇ ಕಾಲೇಜಿಗೆ ಬಂದರೆ ಕಲಿಕೆಯಲ್ಲಿ ಏಕಾಗ್ರತೆ ಬರುವುದಿಲ್ಲ. ಕ್ರೀಡೆಗಳಲ್ಲಿ ಭಾಗಿಯಾದರೆ ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಳ್ಳಬಹುದು ಎಂದರು.

ವಿದ್ಯಾರ್ಥಿನಿಯರು ಜೀವನಶೈಲಿ ಬದಲಾವಣೆಗೆ ಈಗಿನಿಂದಲೇ ಸಂಕಲ್ಪ ಮಾಡಬೇಕು. ದಿನಚರಿಯಲ್ಲಿ ಕೆಲ ಸಮಯ ಧ್ಯಾನಕ್ಕೆ ಮೀಸಲಿಸಬೇಕು. ವರ್ಷಕ್ಕೆರಡರಂತೆ ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧೀಜಿ ಮೊದಲಾದವರ ಆತ್ಮಚರಿತ್ರೆ ಹಾಗೂ ಸಾಧಕರ ಜೀವನ ಚರಿತ್ರೆ ಪುಸ್ತಕಗಳನ್ನು ಓದಬೇಕು ಎಂದು ಡಾ. ಪ್ರಭಾ ಹೇಳಿದರು.



ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳ ಜತೆಗೆ ಉತ್ತಮ ಆರೋಗ್ಯಕ್ಕಾಗಿ ನಿತ್ಯವೂ ಧ್ಯಾನ ಮಾಡುವುದನ್ನು ರೂಢಿಸಿಕೊಳ್ಳಬೇಕು, ಇದರಿಂದ ನಮ್ಮ ವರ್ತನೆಗಳ ಬಗ್ಗೆ ತಿಳಿವಳಿಕೆ, ನಮ್ಮ ತಪ್ಪುಗಳ ಮನವರಿಕೆ ಹಾಗೂ ಸ್ವಯಂ ಜಾಗೃತಿ ಕಲ್ಪನೆ ಮೂಡಲಿದೆ. ಹೀಗಾಗಿ ಕನಿಷ್ಟ 21 ದಿನದ ಮಟ್ಟಿಗೆ ಧ್ಯಾನ ಮಾಡಿಯೇ ಮುಂದಿನ ಕೆಲಸ ನಿರ್ವಹಿಸುತ್ತೇನೆಂಬ ಸಂಕಲ್ಪ ಮಾಡಿ ಎಂದು ಹೇಳಿದರು.

ವಿದ್ಯಾರ್ಥಿ ಜೀವನದಲ್ಲಿ ಅಧ್ಯಯನದ ಜತೆಯಲ್ಲೇ ಊಟ- ಆಟದ ಕಡೆಗೂ ಗಮನ ಹರಿಸಬೇಕು. ಅಕಾಡೆಮಿಕ್ ಶಿಕ್ಷಣ ಪೂರೈಸುವುದುದೆಂದರೆ ಕೇವಲ ಓದೇ ಅಲ್ಲ. ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಬೇಕು. ಹೊಸ ಆಲೋಚನೆಗಳೊಂದಿಗೆ ನಿಮ್ಮ ಊಟವನ್ನು ನೀವೇ ಗಳಿಸಬೇಕು ಎಂದು ಹೇಳಿದರು.

ಎವಿಕೆ ಕಾಲೇಜಿನಲ್ಲಿ 1200 ವಿದ್ಯಾರ್ಥಿನಿಯರು ಓದುತ್ತಿರುವುದು ಹೆಮ್ಮೆಯ ವಿಚಾರ. ಒಬ್ಬ ಹೆಣ್ಣು ಕಲಿತರೆ ಇಡೀ ಮನೆಯನ್ನೇ ಬದಲಾವಣೆ ಮಾಡಬಹುದು. ಹೀಗಾಗಿ ಎಲ್ಲ ವಿದ್ಯಾರ್ಥಿನಿಯರ ಕುಟುಂಬಗಳು ಕೂಡ ಬದಲಾಗಲಿವೆ ಎಂದು ಹೇಳಿದರು. ರ್‍ಯಾಂಕ್ ವಿಜೇತರಾದ ಪಲ್ಲವಿ ಚವ್ಹಾಣ್, ಕೆ.ಎಸ್.ಸ್ನೇಹಾ, ಪಿ.ಕೆ.ಅಂಕಿತಾ, ಸಂಜನಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಕಮಲ ಸೊಪ್ಪಿನ್ ಮಾತನಾಡಿ, ನಮ್ಮ ಕಾಲೇಜು ಸತತ 54 ವರ್ಷಗಳ ಕಾಲ ವಿದ್ಯಾದಾನ ಮಾಡುತ್ತ ಬಂದ ಸಂಸ್ಥೆ. ಇಲ್ಲಿ ಅಧ್ಯಯನ ಮಾಡಿದ ಅದೆಷ್ಟೋ ವಿದ್ಯಾರ್ಥಿನಿಯರು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರು. ನ್ಯಾಕ್ ನಿಂದ 'ಎ' ಗ್ರೇಡ್ ಪಡೆದ ಕಾಲೇಜು ನಮ್ಮದು, ಇಲ್ಲಿ ಬೋಧನಾ ಅನುಭವ ಹೊಂದಿದ ಅಧ್ಯಾಪಕರಿದ್ದಾರೆ. ಅವರ ಪರಿಶ್ರಮ ನಿಮಗಾಗಿ ಮೀಸಲಿದೆ. ಅವರ ಜ್ಞಾನ ನಿಮಗೆ ಸದಾಕಾಲವೂ ಸಿಗಲಿದೆ ಎಂದರು

ಐಕ್ಯುಎಸಿ ಸಂಯೋಜಕ ಪ್ರೊ.ಆರ್.ಆರ್. ಶಿವಕುಮಾರ್, ಎವಿಕೆ ಪಪೂ ಕಾಲೇಜಿನ ಪ್ರಾಚಾರ್ಯ ರವಿ ಬಣಕಾರ್, ವಿದ್ಯಾರ್ಥಿ ಕ್ಷೇಮಾಧಿಕಾರಿ ಡಾ. ರಣಧೀರ, ಸಾಂಸ್ಕೃತಿಕ ಸಮಿತಿ ಸಂಯೋಜಕಿ ಡಾ.ಆರ್. ಜಿ.ಕವಿತಾ, ವಿದ್ಯಾರ್ಥಿ ಸಂಘದ ವಿವಿಧ ವಿಭಾಗದ ಕಾರ್ಯದರ್ಶಿಗಳಾದ ಎಂ. ಸಂಗೀತಾ, ಎಚ್.ಎಚ್. ಸ್ಮಿತಾ, ಟಿ. ಐಶ್ವರ್ಯಾ ಇದ್ದರು. ಟಿ.ಎಚ್.ಅಂಕಿತಾ ಸ್ವಾಗತಿಸಿದರು. ವಿದ್ಯಾ, ಪಲ್ಲವಿ ಕಾರ್ಯಕ್ರಮ ನಿರೂಪಿಸಿದರು. ಕೆ.ಎಂ. ಲಕ್ಷ್ಮೀ ವಂದಿಸಿದರು.

## ಹೆಚ್. ನಾಗೇಂದ್ರಪ್ಪ ನಿಧನ



ದಾವಣಗೆರೆ ಶಿವಕುಮಾರಸ್ವಾಮಿ ಬಡಾವಣೆ, ಮೊದಲನೇ ಹಂತದ ವಾಸಿ, ರಾಮಗೊಂಡನಹಳ್ಳಿ **ಹೆಚ್. ನಾಗೇಂದ್ರಪ್ಪ** ಇವರು, ದಿನಾಂಕ 10.06.2023ರ ಶನಿವಾರ ಮಧಾಹ್ನ 3.40 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು,ಅಣ್ಣ-ತಮ್ಮಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 11.6.2023ರ ಭಾನುವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮವಾದ ರಾಮಗೊಂಡನಹಳ್ಳಿ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬದವರು,**
ಪತ್ನಿ : ಅನಸೂಯಮ್ಮ ಮತ್ತು ಮಕ್ಕಳು.
ಅಣ್ಣ : ಹೆಚ್. ಮಹೇಶ್ವರಪ್ಪ ಮತ್ತು ಸಹೋದರರು.
ಮೊ : 94486 94755

## ಅವಳಿ ನಗರದಲ್ಲಿನ 15 ಜನ ಭಿಕ್ಷುಕರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ



ದಾವಣಗೆರೆ, ಜೂ.10- ದಾವಣಗೆರೆ ಮತ್ತು ಹರಿಹರದ ರೈಲ್ವೇ ಸ್ಟೇಷನ್, ಬಸ್ ನಿಲ್ದಾಣ, ದೇವಸ್ಥಾನ, ಮಸೀದಿ, ಮಾರುಕಟ್ಟೆ ಮತ್ತಿತರೆ ಕಡೆ ಭಿಕ್ಷಾಟನೆಯಲ್ಲಿ ತೊಡಗಿದ್ದ 15 ಜನರನ್ನು ನಿರಾಶ್ರಿತರ ಕೇಂದ್ರಕ್ಕೆ ಕಳುಹಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ.ನಾಗರಾಜ ಅವರ ಮಾರ್ಗದರ್ಶನದಲ್ಲಿ ಶನಿವಾರ ರಾತ್ರಿ ನಿರಾಶ್ರಿತರ ಪರಿಹಾರ ಕೇಂದ್ರದ ನಿರ್ದೇಶಕ ಕೆ.ಆರ್.ಕಾಶಿನಾಥ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಭಿಕ್ಷುಕರನ್ನು ವಶಕ್ಕೆ ಪಡೆಯಲಾಯಿತು.

ಕಾಶಿನಾಥ್ ಮಾತನಾಡಿ, 15 ಜನ ನಿರಾಶ್ರಿತರನ್ನು ವಶಕ್ಕೆ ಪಡೆದು, ಅವರೆಲ್ಲರ ಆರೋಗ್ಯ ತಪಾಸಣೆ ಮಾಡಿಸಿ, ನಿರಾಶ್ರಿತ ಕೇಂದ್ರದಲ್ಲಿರಿಸಲಾಗುವುದು. ಊಟ, ಉಪಹಾರ ನೀಡಿ, ಮಾನಸಿಕ ಧೈರ್ಯ ತುಂಬಿ, ಶುಚಿತ್ವ, ಆರೋಗ್ಯಯುತ ಜೀವನ ನಡೆಸಲು ಸಹಕರಿಸಲಾಗುವುದು. ಅಲ್ಲದೇ ಅವರಿಗೆ ವೃತ್ತಿ ಆಧಾರಿತ ತರಬೇತಿ ನೀಡುವ ಮೂಲಕ ಭಿಕ್ಷಾಟನೆ ರಹಿತ ನಗರ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿಬ್ಬಂದಿಗಳಾದ ಹನುಮಂತ, ನವೀನಕುಮಾರ್, ಮಂಜುನಾಥ, ಹೇಮಂತ್, ಸುನೀಲ್ ಮತ್ತು ಸಿದ್ದಪ್ಪ ಹಾಜರಿದ್ದರು.

# ವಿಪಕ್ಷದವರೂ ಶುಭ ಕೋರುವಂತೆ ಮಾಡಿದ ಕೀರ್ತಿ ಮತದಾರರದ್ದು

### ಹೊನ್ನಾಳಿ ಶಾಸಕ : ಡಿ.ಜಿ.ಶಾಂತನಗೌಡ



### ಸೊರಟೂರು ಅಭಿಮಾನಿಗಳಿಂದ 1 ಕ್ವಿಂಟಾಲ್ ಬೇಳೆಯ ಹೋಳಿಗೆ ಸಿಹಿ ಸವಿದ ಗ್ರಾಮಸ್ಥರು

ಹೊನ್ನಾಳಿ, ಜೂ.10- ಹೊನ್ನಾಳಿಯಲ್ಲಿ ಗೆದ್ದಿರುವ ಶಾಸಕರು ಯಾರೆಂದು ವಿಧಾನಸಭೆಯಲ್ಲಿ ಆಡಳಿತ ಪಕ್ಷದವರೊಂದಿಗೆ ವಿರೋಧ ಪಕ್ಷದವರೂ ಕೈ ಕುಲುಕಿ ಶುಭ ಹಾರೈಸುತ್ತಿರುವ ಈ ಕೀರ್ತಿಯು ತಾಲ್ಲೂಕಿನ ಮತದಾರರಿಗೆ ಸೇರಬೇಕೆಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ಅವರು ತಾಲ್ಲೂಕಿನ ಸೊರಟೂರು ಗ್ರಾಮದಲ್ಲಿ ಗ್ರಾಮಸ್ಥರು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನಿತರಾಗಿ ಮಾತನಾಡಿದರು.

ಶನಿವಾರ ಗ್ರಾಮದ ಆಂಜನೇಯ ದೇವಸ್ಥಾನದ ದೇವರ ಸನ್ನಿಧಿಯಲ್ಲಿ ಸನ್ಮಾನಿಸುತ್ತಿರುವುದು ಹೆಚ್ಚು ಹರ್ಷ ಸಂದಿದೆ. ಮುಖ್ಯಮಂತ್ರಿ ಮತ್ತು ಉಪ-ಮುಖ್ಯಮಂತ್ರಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ್ದು ಶನಿವಾರದಂದೇ, ಮತ್ತೊಂದು ಶನಿವಾರ ಇತರೆ ಸಚಿವರು ಪ್ರಮಾಣ ವಚನ ಸ್ವೀಕಾರ ಮಾಡಿದರೆ, ಈ ಶನಿವಾರ ನನ್ನನ್ನು ಅಭಿನಂದಿಸುತ್ತಿರುವುದು ಶುಭ ದಿನವಲ್ಲವೆಂಬ ತಪ್ಪು ಕಲ್ಪನೆಯಿಂದ ಹೊರಬರಬೇಕಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಮಾತನಾಡಿ, ಕಾಂಗ್ರೆಸ್ ಚುನಾವಣಾ ಪೂರ್ವದಲ್ಲಿ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಲು ಮುಂದಾಗಿದೆ. ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಕಾಂಗ್ರೆಸ್ ಪಕ್ಷದ ಭರವಸೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿರುವುದನ್ನು ಮತದಾರರು ನಂಬದಿರುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಮುಖಂಡ ಎಂ.ಆರ್. ಮಹೇಶ್ ಮಾತನಾಡಿ, ಕಾಂಗ್ರೆಸ್ ಪಕ್ಷ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಲು ಮುಂದಾಗಿದೆ. ಮಾಜಿ ಶಾಸಕ ರೇಣುಕಾಚಾರ್ಯ ನೀವು ನೀಡಿದ 4 ಭರವಸೆಗಳನ್ನು ಯಾವಾಗ ಈಡೇರಿಸುತ್ತೀರಿ ಎಂಬುದನ್ನು ಸ್ಪಷ್ಟಪಡಿಸಿ ಎಂದು ಒತ್ತಾಯಿಸಿ, ಹೊನ್ನಾಳಿಯ ಪುರಸಭೆ ಚುನಾವಣೆ ಸಂದರ್ಭದಲ್ಲಿ ನಿವೇಶನ ನೀಡುವುದಾಗಿ ಹೊನ್ನಾಳಿ ಪಟ್ಟಣದ ನಿವಾಸಿಗಳಿಂದ 2000 ಅರ್ಜಿ ಪಡೆದಿದ್ದು ಇಲ್ಲಿಯವರೆಗೂ ವಿತರಿಸಿಲ್ಲವೇಕೆ? ಎಂದು ಪ್ರಶ್ನಿಸಿದರು.

ಹೊನ್ನಾಳಿ ವಿಧಾನಸಭಾ ಚುನಾವಣಾ ಪೂರ್ವದಲ್ಲಿ ನೊಳಂಬ ಮತ್ತು ಕುಂಚಿಟಿಗ ಸಮಾಜಗಳ ಸಮುದಾಯ ಭವನಕ್ಕೆ ತಲಾ 2.5 ಕೋಟಿ ಅನುದಾನವನ್ನು ಗೆದ್ದರೂ, ಸೋತರೂ ಕೊಡುವೆ ಎಂದಿದ್ದೀರಿ. ಈವರೆಗೂ ಕೊಟ್ಟಿರುವಿರಾ, ಇತ್ತೀಚಿನ ಕುರುಬ ಸಮಾವೇಶದಲ್ಲಿ ಸಚಿವರಾಗಿದ್ದ ಎಂ.ಟಿ.ಬಿ.ನಾಗರಾಜ್ ಹೊನ್ನಾಳಿಗೆ ಆಗಮಿಸಿದ್ದ ಸಂದರ್ಭದಲ್ಲಿ ಕುರುಬ ಸಮಾಜಕ್ಕೆ ನಿವೇಶನ ಕೊಡಿಸುವುದಾಗಿ ಭರವಸೆ ನೀಡಿದ್ದು, ಇಲ್ಲಿಯವರೆಗೂ ಯಾಕೆ ನೀಡಿಲ್ಲ? ನೀವು ನೀಡಿದ್ದ ಈ ನಾಲ್ಕು ಭರವಸೆಗಳನ್ನು ಮೊದಲು ಈಡೇರಿಸಿ ಎಂದು ಸಭೆ ಮೂಲಕ ಒತ್ತಾಯಿಸುವುದಾಗಿ ಹೇಳಿದರು.

ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆರ್. ನಾಗಪ್ಪ ಮಾತನಾಡಿ, ಶಿವಮೊಗ್ಗ-ಹರಿಹರ ರೈಲ್ವೆ ಮಾರ್ಗ ಮಂಜೂರಾಗಿದ್ದು ಈವರೆಗೂ ಏಕೆ ನೆನೆಗುದಿಗೆ ಬಿದ್ದಿದೆ ? ಹೊನ್ನಾಳಿಗೆ ಮಂಜೂರಾಗಿದ್ದ ಫುಡ್ ಫ್ಯಾಕ್ಟರಿ ಶಿಕಾರಿಪುರದಲ್ಲಿ ಸ್ಥಾಪಿತವಾಗಿದ್ದು ಏಕೆ? ಎಂಬುದನ್ನು ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಸ್ಪಷ್ಟಪಡಿಸಲಿ ಎಂದು ಒತ್ತಾಯಿಸಿದರು.

ಅಭಿನಂದನಾ ಕಾರ್ಯಕ್ರಮದಲ್ಲಿ ಸೊರಟೂರು ಗ್ರಾಮಸ್ಥರು 1 ಕ್ವಿಂಟಾಲ್ ಬೇಳೆಯಲ್ಲಿ ಸಿದ್ಧಗೊಂಡ ಹೋಳಿಗೆಯ ಸಿಹಿ ಸವಿದಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಹೊನ್ನಾಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಶಿವಯೋಗಿ, ಜಿಲ್ಲಾ ಯುವ ಕಾಂಗ್ರೆಸ್ ಉಪಾಧ್ಯಕ್ಷ ಎಚ್.ಎಸ್.ರಂಜಿತ್, ಕಾಂಗ್ರೆಸ್ ಮುಖಂಡರುಗಳಾದ ಅರ್ಕಾಕ್ ಸಿದ್ದಪ್ಪ, ಎಚ್.ಎ.ಉಮಾಪತಿ, ಸೊರಟೂರು ಗ್ರಾ.ಪಂ.ಅಧ್ಯಕ್ಷೆ ಸುಮಾ ಕುಮಾರ್, ಉಪಾಧ್ಯಕ್ಷೆ ನಾಗರತ್ನಬಾಯಿ, ಸದಸ್ಯರಾದ ಹಾಲಮ್ಮ ಹನುಮಂತಪ್ಪ, ಕೆಂಚಮ್ಮ ಕುಮಾರ್, ಮರಿಯಪ್ಪ ಕಲ್ಯಾಣಿ, ಪರಶುರಾಮರಾವ್, ವಿರುಪಾಕ್ಷಪ್ಪ, ರಾಮರಾವ್, ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯ ಹನುಮಂತಪ್ಪ ಕಾಕಳೆ, ಗ್ರಾಮದ ಮುಖಂಡರಾದ ಜಿ.ಶಿವನಗೌಡ, ನಿವೃತ್ತ ಶಿಕ್ಷಕ ಚಂದ್ರಪ್ಪ, ಹನುಮಂತಪ್ಪ ದೊಗ್ಗಳ್ಳಿ, ಬಸವನಗೌಡ ಪಾಟೀಲ್ ಸೊರಟೂರು ಅಕ್ಕ-ಪಕ್ಕದ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕಾಂಗ್ರೆಸ್ ನಾಯಕರ ವಿಶ್ವಾಸ ಪಡೆದು ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ

### ಶಾಸಕ ಬಿ.ಪಿ.ಹರೀಶ್



ಮಲೇಬೆನ್ನೂರು, ಜೂ.10- ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಮಾಜಿ ಶಾಸಕ ಎಸ್.ರಾಮಪ್ಪ ಅವರನ್ನು ವಿಶ್ವಾಸಕ್ಕೆ ಪಡೆದು ಹರಿಹರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ತರಲು ಹೋರಾಟ ಮಾಡುತ್ತೇನೆ ಎಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ಅವರು ಶನಿವಾರ ಹರಳಹಳ್ಳಿ ಗ್ರಾಮದಲ್ಲಿ ಹರಿಹರ ತಾ. ಪಂ. ಮತ್ತು ಹರಳಹಳ್ಳಿ ಗ್ರಾ.ಪಂ.ನ 15ನೇ ಹಣಕಾಸು ಯೋಜನೆಯ ಅನುದಾನದಡಿ ನಿರ್ಮಿಸಿರುವ ವಿಶೇಷಚೇತನರ ಕ್ಷೇಮಾಭಿವೃದ್ಧಿ ಭವನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾನು ಮೊದಲ ಬಾರಿಗೆ ಶಾಸಕನಾಗಿದ್ದಾಗ ನಮ್ಮದೇ ಸರ್ಕಾರ ಇತ್ತು. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದರು. ಆಗ ನಿರೀಕ್ಷೆಗೂ ಮೀರಿ ಅನುದಾನ ತಂದು ಅಭಿವೃದ್ಧಿ ಕೆಲಸಗಳನ್ನು ಮಾಡಿಸಿದ್ದೇವು. ನಂತರ ಹೆಚ್.ಎಸ್.ಶಿವಶಂಕರ್ ಅವರು ಶಾಸಕರಾದಾಗ ಕಾಂಗ್ರೆಸ್ ಸರ್ಕಾರ ಇತ್ತು. ಎಸ್.ರಾಮಪ್ಪ ಅವರು ಶಾಸಕರಾದ 18 ತಿಂಗಳು ಸಮ್ಮಿಶ್ರ ಸರ್ಕಾರ ಇತ್ತು. ನಂತರ ಬಿಜೆಪಿ ಸರ್ಕಾರ ಬಂತು. ಆಗ ಅವರು ನಿರೀಕ್ಷೆ ಮಾಡಿದಷ್ಟು ಕೆಲಸಗಳು ಆಗಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಾನು ಗೆದ್ದಿದ್ದೇನೆ ಕಾಂಗ್ರೆಸ್ ಸರ್ಕಾರ ಬಂದಿದೆ. ಹರಿಹರ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳು ಏನೂ ಆಗಲ್ಲ ಎಂಬ ಭಾವನೆ ಜನರಲ್ಲಿದೆ. ಅಭಿವೃದ್ಧಿ ಕೆಲಸಗಳು ಆಗಲ್ಲ ಎಂಬ ಬಗ್ಗೆ ಚಿಂತೆ ಮಾಡ ಬೇಡಿ. ಸರ್ಕಾರದಲ್ಲಿರುವವರ ಮನವೊಲಿಸಿ ಮತ್ತು ಹರಿಹರ ಕ್ಷೇತ್ರದ ಕಾಂಗ್ರೆಸ್ ನಾಯಕರ ಜೊತೆಗೂಡಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದು ಹರೀಶ್ ಹೇಳಿದರು.

ಅಧಿಕಾರಿಗಳು ಎಲ್ಲದಕ್ಕೂ ಕಾನೂನು ಹೇಳದೆ ಸಂದರ್ಭಕ್ಕೆ ಅನುಗುಣವಾಗಿ ಮಾನವೀಯ ನೆಲೆಗಟ್ಟಿನ ಮೇಲೆ ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕೆಂದು ಹರೀಶ್ ಕಿವಿಮಾತು ಹೇಳಿದರು.

ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ಮಾತನಾಡಿ, ನಾನು ಗೆದ್ದ ನಂತರ ಪಂಚಾಯಿತಿಗಳಿಗೆ ಬಲ ನೀಡುವಂತೆ ಸರ್ಕಾರ ಮಟ್ಟದಲ್ಲಿ ಹೋರಾಟ ಮಾಡಿದ್ದೇನೆ.

ಪ್ರತಿ ಗ್ರಾ.ಪಂ.ಗಳಿಗೂ ಭೇಟಿ ನೀಡಿ, ಜನಪ್ರತಿನಿಧಿಗಳ ಹಾಗೂ ಜನರ ಸಮಸ್ಯೆ ಆಲಿಸಿ, ಪರಿಹಾರಕ್ಕೆ ಯತ್ನಿಸುತ್ತೇನೆಂದು ನವೀನ್ ಹೇಳಿದರು.

ಹರಳಹಳ್ಳಿ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ದೇವಕಿ ಹನುಮಂತಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಉಪಾಧ್ಯಕ್ಷೆ ಶ್ರೀಮತಿ ನಾಗಮ್ಮ ರಾಮಾಂಜನೇಯ, ತಾ.ಪಂ. ಮಾಜಿ ಅಧ್ಯಕ್ಷರಾದ ಐರಣಿ ಅಣ್ಣಪ್ಪ, ಗುಳದಹಳ್ಳಿ ಮಹಾಂತೇಶ್, ಜಿ.ಪಂ. ಎಇಇ ಗಿರೀಶ್, ತಾ.ಪಂ. ಎಡಿ ಶ್ರೀಮತಿ ಪೂಜಾ, ಗ್ರಾ.ಪಂ. ಪಿಡಿಓ ಕೆ.ಬಿ.ಶಾಂತಪ್ಪ, ಎಸ್‌ಡಿಎ ಡಿ.ಡಿ.ರೇವಣಪ್ಪ ಸೇರಿದಂತೆ ಗ್ರಾ.ಪಂ. ಸರ್ವ ಸದಸ್ಯರು, ಗ್ರಾಮಸ್ಥರು ಈ ವೇಳೆ ಹಾಜರಿದ್ದರು.

## ಹರಿಹರ : ಪಂಚಮಸಾಲಿ ಪೀಠಕ್ಕೆ ಸಚಿವ ಎಸ್ಸೆಸ್ಸೆಂ ಭೇಟಿ



ಹರಿಹರ, ಜೂ.10- ಹರಿಹರ ತಾಲ್ಲೂಕಿನ ಹನಗವಾಡಿ ಸಮೀಪದ ಶ್ರೀ ವೀರಶೈವ ಲಿಂಗಾಯತ ಪಂಚಾಮ ಸಾಲಿ ಪೀಠಕ್ಕೆ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಅವರು ಭೇಟಿ ನೀಡಿ, ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ಆಶೀರ್ವಚನ ಪಡೆದರು. ಈ ಸಂದರ್ಭದಲ್ಲಿ ಪಂಚಮ ಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಎಸ್. ಉಮಾಪತಿ ಅವರು ಉಪಸ್ಥಿತರಿದ್ದರು.

## ನಗರದ ಪಿ.ಬಿ. ರಸ್ತೆಯಲ್ಲಿ ಅಪಘಾತ: ಹೋಮಿಯೋಪತಿ ವೈದ್ಯ ಸಾವು



ದಾವಣಗೆರೆ, ಜೂ.10- ನಗರದ ಪಿ.ಬಿ. ರಸ್ತೆಯ ಜಿಎಂಐಟಿ ಕಾಲೇಜಿನ ಬಳಿ ಇರುವ ಪೈಲ್ವಾನ್ ಪಾಪಣ್ಣ ಲೇಔಟ್ ಬಳಿ ಇಂದು ಸಂಜೆ ನಡೆದ ರಸ್ತೆ ಅಪಘಾತದಲ್ಲಿ ಹೋಮಿಯೋಪತಿ ವೈದ್ಯ ಡಾ. ಕೆ. ಕಿರಣ್ ಮೃತಪಟ್ಟಿದ್ದಾರೆ.

ನಗರದ ಶ್ರೀ ಶಿವಕುಮಾರಸ್ವಾಮಿ ಬಡಾವಣೆ ನಿವಾಸಿಯಾಗಿರುವ ಮೃತ ಕಿರಣ್, ಹರಿಹರದಲ್ಲಿ ಕ್ಲಿನಿಕ್ ಇಟ್ಟುಕೊಂಡಿದ್ದು, ಹರಿಹರದಿಂದ ನಗರಕ್ಕೆ ಮೋಟಾರ್ ಬೈಕ್‌ನಲ್ಲಿ ಬರುತ್ತಿದ್ದ ಸಂದರ್ಭದಲ್ಲಿ ಎದುರಿಗೆ ಬಂದ ಲಾರಿ ಅಪ್ಪಳಿಸಿದ ಪರಿಣಾಮ ಈ ಅಪಘಾತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಹೊನ್ನಾಳಿ ತಾಲ್ಲೂಕು ಯರೇಚಿಕ್ಕನಹಳ್ಳಿ ಗ್ರಾಮದ ಶ್ರೀಮತಿ ಮಂಜುಳಾ ಮತ್ತು ಡಿ.ಬಿ. ಕುಮಾರಸ್ವಾಮಿ ದಂಪತಿ ಪುತ್ರ ಕಿರಣ್ ಅವರಿಗೆ ಸುಮಾರು 26 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆಯು ನಾಳೆ ದಿನಾಂಕ 11ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಯರೇಚಿಕ್ಕನಹಳ್ಳಿಯಲ್ಲಿ ನಡೆಯಲಿದೆ.

ಮೃತರ ಕಿರಣ್ ಅವರ ತಂದೆ ಡಿ.ಬಿ. ಕುಮಾರಸ್ವಾಮಿ ನಗರದ ಬಾಪೂಜಿ ಸಹಕಾರಿ ಬ್ಯಾಂಕ್ ಹದಡಿ ರಸ್ತೆ ಶಾಖೆಯ ಉದ್ಯೋಗಿ.

## ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಸಿಎಂಗೆ ರಾಮಪ್ಪ ಮನವಿ



ಮಲೇಬೆನ್ನೂರು,ಜೂ. 10- ಬಹುನಿರೀಕ್ಷಿತ ಭೈರನಪಾದ ಏತ ನೀರಾವರಿ ಯೋಜನೆ ಅನುಷ್ಠಾನ, ಹರಿಹರ ನಗರಸಭೆ ಹಾಗೂ ಮಲೇಬೆನ್ನೂರು ಪುರಸಭೆಗೆ ಹೆಚ್ಚಿನ ಅನುದಾನ ಸೇರಿದಂತೆ ಹರಿಹರ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅನುದಾನ ನೀಡುವಂತೆ ಮಾಜಿ ಶಾಸಕ ಎಸ್.ರಾಮಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ವಿಧಾನಸೌಧದಲ್ಲಿ ಶುಕ್ರವಾರ ಭೇಟಿ ಮಾಡಿ ಒತ್ತಾಯಿಸಿದ್ದಾರೆ.

ಹರಿಹರ ತಾಲ್ಲೂಕಿನ ರೈತರ ಬದುಕಿಗೆ ಬೆಳಕಾಗುವಂತಹ ಭೈರನಪಾದ ಏತ ನೀರಾವರಿ ಯೋಜನೆ ಮುಂದಿನ ತಿಂಗಳು ಮಂಡಿಸುವ ಬಜೆಟ್‌ನಲ್ಲೇ ಘೋಷಿಸಿ, ಅನುಷ್ಠಾನಗೊಳಿಸ ಬೇಕು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭೈರನಪಾದ ಯೋಜನೆ ಜಾರಿಗಾಗಿ ಸಾಕಷ್ಟು ಹೋರಾಟ, ಪ್ರಯತ್ನ ನಡೆಸಿದ್ದವು. ಆದರೆ ಹಿಂದಿನ ಸರ್ಕಾರ ನಮ್ಮ ಮನವಿಗೆ ಸ್ಪಂದನೆ ನೀಡಲಿಲ್ಲ.

ಗೋವಿನಹಾಳ್ ಸಮೀಪ ತುಂಗಭದ್ರಾ ನದಿಯಿಂದ ನೀರು ಲಿಫ್ಟ್ ಮಾಡಿ, ಭದ್ರಾ ಅಚ್ಚುಕಟ್ಟಿನ ಕಡೆಯ ಭಾಗದ ರೈತರಿಗೆ ನೀರು ತಲುಪಿಸುವ ಭೈರನಪಾದ ಯೋಜನೆ ಇದಾಗಿದೆ. 2013ರಲ್ಲೇ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಸಿಕ್ಕಿದ್ದರೂ ಅದು ಕಾರ್ಯ ರೂಪಕ್ಕೆ ಬರಲಿಲ್ಲ. 2018-19ರಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಆದರೆ, ಅದ್ಯಾವುದೂ ಕಾರ್ಯ ಸಾಧ್ಯವಾಗಿಲ್ಲ. ಸುಮಾರು 1632 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವಂತಹ ಯೋಜನೆ ಇದು ಎಂದು ರಾಮಪ್ಪ ಅವರು ಸಿಎಂ ಗಮನಕ್ಕೆ ತಂದರು.

ಯೋಜನೆಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು, ಆದಷ್ಟು ಬೇಗನೆ ಕಾಮಗಾರಿ ಆರಂಭಿಸಬೇಕು. ಹರಿಹರ ತಾಲ್ಲೂಕನ್ನೇ ಹಾದುಹೋಗುವ ತುಂಗಭದ್ರಾ ನದಿಯಿಂದ ತಾಲ್ಲೂಕಿನ ಕೆರೆಗಳಿಗೆ ಮಳೆಗಾಲದಲ್ಲಿ ನೀರು ತುಂಬಿಸುವ ಕೆಲಸ ಆಗಬೇಕು. ಕೊಮಾರನಹಳ್ಳಿ ಸೇರಿ, ಅನೇಕ ಕೆರೆಗಳಿಗೆ ನದಿ ನೀರು ತುಂಬಿಸುವುದರಿಂದ ಅಂತರ್ಜಲ ವೃದ್ಧಿಯಾಗುವ ಜೊತೆಗೆ, ರೈತರಿಗೂ ಸಾಕಷ್ಟು ಅನುಕೂಲ ಕಲ್ಪಿಸಿದಂತಾಗುತ್ತದೆ ಎಂದು ತಿಳಿಸಿದರು.

**ಸಕಾರಾತ್ಮಕವಾಗಿ ಸ್ಪಂದಿಸಿದ ಸಿಎಂ:** ಮನವಿ ಪತ್ರ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸಭೆ ಅಧಿವೇಶನದಲ್ಲಿ ರಾಮಪ್ಪ ಇದೇ ಯೋಜನೆ ಬಗ್ಗೆ, ಹರಿಹರ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಧ್ವನಿ ಎತ್ತುತ್ತಿದ್ದೆ. ಭೈರನಪಾದ ಯೋಜನೆ ಬಗ್ಗೆಯೂ ಅಧಿವೇಶನದಲ್ಲಿ ಮಾತನಾಡಿದ್ದೆಲ್ಲಾ ನನಗೆ ನೆನಪಿದೆ. ಭೈರನಪಾದ ಯೋಜನೆ ಸೇರಿ ನಿಮ್ಮ ಕ್ಷೇತ್ರದ ಎಲ್ಲಾ ಮನವಿಗಳ ಬಗ್ಗೆ ಶೀಘ್ರವೇ ಕ್ರಮಕೈಗೊಳ್ಳುತ್ತೇವೆಂಬುದಾಗಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಧಿವೇಶನದಲ್ಲಿ ಹಿಂದೆ ತಾವು ಭೈರನಪಾದ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದನ್ನು ನೆನಪಿಸಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಮಪ್ಪ ಕೃತಜ್ಞತೆ ಸಲ್ಲಿಸಿದರು.

## ಪ್ರೀತಿ ಆರ್ಕೆ ಟ್ರಸ್ಟ್ : ಆರೋಗ್ಯ ತಪಾಸಣೆ



ದಾವಣಗೆರೆ, ಜೂ. 10- ನಗರದ ಪ್ರೀತಿ ಆರ್ಕೆ ಟ್ರಸ್ಟ್, ಆರ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರೈಡೆಂಟ್ ಡಯೋಗ್ನೋಸ್ಟಿಕ್ ಸಹಭಾಗಿತ್ವ, ಡಾ. ರವಿ ಕುಮಾರ್ ಟಿ. ಜಿ. ಅವರ ನೇತೃತ್ವದಲ್ಲಿ ನಗರದ ವಾಟರ್ ಟ್ಯಾಂಕ್ ಉದ್ಯಾನದಲ್ಲಿ ಇಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

## ನಗರದಲ್ಲಿ ಇಂದು ಕಾರ್ಮಿಕ ದಿನಾಚರಣೆ, ಹಿರಿಯ ಕಾರ್ಮಿಕರಿಗೆ ಅಭಿನಂದನೆ

ಕರ್ನಾಟಕ ಶ್ರಮಿಕ ಶಕ್ತಿ (ಕೆಎಸ್‌ಎಸ್) ಜಿಲ್ಲಾ ಘಟಕದ ಆಶ್ರಯದಲ್ಲಿ 137ನೇ ಕಾರ್ಮಿಕ ದಿನಾಚರಣೆ ಮತ್ತು ಹಿರಿಯ ಕಾರ್ಮಿಕರಿಗೆ ಅಭಿನಂದನಾ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ವನಿತಾ ಸಮಾಜದಲ್ಲಿ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಎಲ್.ಹೆಚ್. ಅರುಣ್‌ಕುಮಾರ್, ಸತೀಶ್ ಅರವಿಂದ್ ಆಗಮಿಸುವರು. ಅಧ್ಯಕ್ಷತೆಯನ್ನು ಕರ್ನಾಟಕ ಜನಶಕ್ತಿಯ ಕಾರ್ಯದರ್ಶಿ ಪವಿತ್ರ ಮತ್ತು ಕರ್ನಾಟಕ ಶ್ರಮಿಕ ಶಕ್ತಿಯ ಸೈಯದ್ ಅಶ್ಫಾಕ್ ವಹಿಸುವರು.

## ಗೂಡ್ಸೆ ವೈಭವೀಕರಣಕ್ಕೆ ಕಾಂಗ್ರೆಸ್ ತರಾಟೆ

ನವದೆಹಲಿ, ಜೂ. 10 – ಬಿಜೆಪಿ ನಾಯಕರು ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೂಡ್ಸೆಯನ್ನು ವೈಭವೀಕರಿಸುತ್ತಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಂತಹ ಗೂಡ್ಸೆ ಆರಾಧಕರನ್ನು ಹೊರಗೆಸೆಯಬೇಕು. ಇಲ್ಲವೇ ಗಾಂಧಿ ಪ್ರತಿಮೆಗೆ ನಮಿಸುವ ಅಣಕ ನಿಲ್ಲಿಸಬೇಕು ಎಂದು ಕಾಂಗ್ರೆಸ್ ಕಿಡಿ ಕಾರಿದೆ.

ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಗೂಡ್ಸೆಯನ್ನು ಭಾರತದ ಸುಪುತ್ರ ಎಂದು ಬಣ್ಣಿಸಿದ್ದರು. ಉತ್ತರಾಖಂಡದ ಮಾಜಿ ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಅವರು ಗೂಡ್ಸೆ ದೇಶಭಕ್ತ ಎಂದಿದ್ದರು.

ಈ ಬಗ್ಗೆ ಆಕ್ಷೇಪಿಸಿರುವ ಕಾಂಗ್ರೆಸ್, ಬಿಜೆಪಿ ನಾಯಕರು ಗೂಡ್ಸೆ ವೈಭವೀಕರಿಸುತ್ತಿದ್ದಾರೆ. ಆದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೌನವಾಗಿದ್ದಾರೆ ಎಂದು ಹೇಳಿದೆ.

## ನಾನು ಶಾಸಕನಾಗಲು ಕನಕ ಶ್ರೀಗಳ ಆಶೀರ್ವಾದವೇ ಕಾರಣ

### ಹೂವಿನಹಡಗಲಿ ಶಾಸಕ - ಕೃಷ್ಣನಾಯಕ



ಹೂವಿನಹಡಗಲಿ, ಜೂ. 10- ನಾನು ಶಾಸಕನಾಗಲು ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದ ಶ್ರೀಗಳ ಆಶೀರ್ವಾದವೇ ಕಾರಣ ಎಂದು ಶ್ರೀಕೃಷ್ಣ ನಾಯಕ ಹೇಳಿದರು.

ಇಲ್ಲಿನ ಕನಕ ಭವನದಲ್ಲಿ ತಾಲ್ಲೂಕು ಕುರುಬರ ಸಂಘದ ವತಿಯಿಂದ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಪ್ರತಿ ವರ್ಷಕ್ಕೆ ಒಬ್ಬ ಶಾಸಕರಿಗೆ 2 ಕೋಟಿ ಅನುದಾನವನ್ನು ಮಾತ್ರ ಕೊಡಲಾಗುತ್ತಿದೆ. ರಾಜ್ಯದಲ್ಲಿ ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿ ಇಲ್ಲ, ಆದರೂ ನಾವು ವಿರೋಧ ಪಕ್ಷದಲ್ಲಿದ್ದು ಹೆಚ್ಚಿನ ಅನುದಾನವನ್ನು ತರುವ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇವೆ. ಈ ಕಾರಣಕ್ಕಾಗಿ ಕೊಂಚ ವಿಳಂಬವಾಗಿದೆ. ಆದರೆ, ಆತುರ ಪಡುವುದು ಬೇಡ. ನನ್ನಿಂದ ವೈಯಕ್ತಿಕವಾಗಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಗೊತ್ತಿಲ್ಲ. ಆದರೆ ಶಿಕ್ಷಣ ಮತ್ತು ಉದ್ಯೋಗ ಕೊಡಿಸುವ ನಿಟ್ಟಿನಲ್ಲಿ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುವುದು ನನ್ನ ಗುರಿಯಾಗಿದೆ. ಎಲ್ಲರ ಸಹಕಾರ ಬೇಕು.

ಸಮಾರಂಭವನ್ನುದ್ದೇಶಿಸಿ ಬಿಜೆಪಿ ಮುಖಂಡ ಓದೋ ಗಂಗಪ್ಪ ಮಾತನಾಡಿದರು.

ಮಾಜಿ ಶಾಸಕ ವಿ.ಬಿ.ಹಾಲಪ್ಪ ಮಾತನಾಡಿ, ಬಿಜೆಪಿ ಅಭ್ಯರ್ಥಿ ಕೃಷ್ಣನಾಯಕ್ ಗೆಲುವಿನಲ್ಲಿ ಕುರುಬ ಸಮಾಜದವರ ಪಾತ್ರ ಮಹತ್ವದ್ದಾಗಿದೆ. ಈಗ ಬ್ಯಾಂಕ್ ಮತ್ತು ಸಹಕಾರ ಸಂಘ ಮಾಡಿದ್ದೀರಿ. ಕನಕ ಭವನ ಕಟ್ಟಿದ್ದೀರಿ ಆದರೆ ಕುರುಬರ ಹಾಸ್ಟೆಲ್ಲನ್ನು ತೆರೆಯಬೇಕೆಂಬುದು ನನ್ನ ಮನವಿ. ಆ ಮೂಲಕ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯವಾಗಲಿದೆ. ಶಾಸಕರೂ ಸಹ ಅದಕ್ಕೆ ಒತ್ತಾಸೆಯಾಗಿ ನಿಲ್ಲುತ್ತಾರೆ ಎಂದು ನಾನು ಭಾವಿಸಿದ್ದೇನೆ. ಕುರುಬರು ಬೇರೆಯಲ್ಲ, ಪಂಚಮಸಾಲಿಗಳು ಬೇರೆ ಅಲ್ಲ. ಏಕೆಂದರೆ ಕಿತ್ತೂರುರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣನವರ ಸಂಬಂಧ ತಾಯಿ-ಮಗನ ಸಂಬಂಧ ಅದೇ ರೀತಿ ನಾವು ಕ್ಷೇತ್ರದಲ್ಲಿ ಇರೋಣ ಎಂದು ಆಶಯ ವ್ಯಕ್ತಪಡಿಸಿದರು.

ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಎಚ್. ಬೀರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವೇದಿಕೆ ಮೇಲೆ ಸಮಾಜದ ಮುಖಂಡರಾದ ಎಂ. ಪರಮೇಶ್ವರಪ್ಪ, ಹೆಚ್. ಪೂಜಪ್ಪ ಕನಕ ಬ್ಯಾಂಕಿನ ಅಧ್ಯಕ್ಷ ಕೆ. ದ್ಯಾಮಪ್ಪ, ಜಿಲ್ಲಾ ಓಬಿಸಿ ಮೋರ್ಚಾ ಅಧ್ಯಕ್ಷ ಇ.ಟಿ. ಲಿಂಗರಾಜ್, ಕನಕ ನೌಕರರ ಸಂಘದ ಅಧ್ಯಕ್ಷ ಎನ್ ಶಿವಪ್ಪ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಶಿವಲಿಂಗಪ್ಪ ಸೇರಿದಂತೆ, ಅನೇಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಿವೃತ್ತ ಶಿಕ್ಷಕ ಕೊಟ್ರಪ್ಪ ಸ್ವಾಗತಿಸಿ, ಎಂ. ಚಿದಾನಂದ ಕಾರ್ಯಕ್ರಮ ನಿರೂಪಿಸಿದರು. ಕು. ಕಾವ್ಯ ಪ್ರಾರ್ಥಿಸಿದರು.

## ಒಂಭತ್ತನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀ ಶ್ಯಾಗಲೆ ಜಿ. ನಾಗಪ್ಪನವರು**

**ಮರಣ : 11.06.2014**

**ಸಂಸ್ಥಾಪಕ ಕಾರ್ಯದರ್ಶಿಗಳು, ಶ್ರೀ ಮಲ್ಲಿಕಾರ್ಜುನ ವಿದ್ಯಾ ಸಂಸ್ಥೆ (ರಿ.) ಶ್ಯಾಗಲೆ, ಮಾಜಿ ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ.**

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳು (11.06.2023) ಕಳೆದರೂ, ನಿಮ್ಮ ನೆನಪು ಸದಾ ಹಸಿರಾಗಿದೆ. ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ...

**ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಗುರಪ್ಪರ ವಂಶಸ್ಥರು, ಶ್ಯಾಗಲೆ ಹಾಗೂ ಬಂಧು-ಮಿತ್ರರು.**

### ಜೋಗಳ್ಳಿ ಲಲಿತಮ್ಮ ನಿಧನ



ರೈತರ ಬೀದಿ, ದಾವಣಗೆರೆ ವಾಸಿಯಾದ ದಿ॥ ಜೋಗಳ್ಳಿ ಹನುಮಂತಪ್ಪನವರ ಧರ್ಮಪತ್ನಿ ಶ್ರೀಮತಿ ಜೋಗಳ್ಳಿ ಲಲಿತಮ್ಮ (75) ಇವರು ದಿನಾಂಕ : 10.06.2023 ರ ಶನಿವಾರ ಬೆಳಿಗ್ಗೆ 10.00 ಗಂಟೆಗೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 11.06.2023ರ ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಆನಗೋಡು ಕೆ.ಎಸ್. ಮಂಜುನಾಥಪ್ಪ ನಿಧನ



ದಾವಣಗೆರೆ ಸರಸ್ವತಿ ಬಡಾವಣೆ ವಾಸಿ ಆನಗೋಡು ಗ್ರಾಮದ ನಿವೃತ್ತ ಫಾರ್ಮಾಸಿಸ್ಟ್ ಕೆ.ಎಸ್. ಮಂಜುನಾಥಪ್ಪ (76) ಅವರು ದಿನಾಂಕ 10.6.2023ರಂದು ಶನಿವಾರ ಮಧ್ಯಾಹ್ನ 3.30ಕ್ಕೆ ನಿಧನರಾಗಿರುತ್ತಾರೆ. ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.6.2023ರ ಭಾನುವಾರ ಮಧ್ಯಾಹ್ನ 12ಕ್ಕೆ ಗ್ಲಾಸ್ ಹೌಸ್ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಮೋದಿ ಸರ್ಕಾರದಲ್ಲಿ ಸಾಲ ಮೂರು ಪಟ್ಟು ಹೆಚ್ಚಳ

### ಶ್ವೇತ ಪತ್ರಕ್ಕೆ ಕಾಂಗ್ರೆಸ್ ಒತ್ತಾಯ

ನವದೆಹಲಿ, ಜೂ. 10 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರದಲ್ಲಿ ಸಾಲದ ಪ್ರಮಾಣ ಮೂರು ಪಟ್ಟು ಹೆಚ್ಚಾಗಿ 155 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಮೋದಿ ಸರ್ಕಾರದಲ್ಲಿ ಆರ್ಥಿಕ ಪರಿಸ್ಥಿತಿ ಅಸ್ತವ್ಯಸ್ತವಾಗಿದೆ. ಇದರಿಂದಾಗಿ 2014ರ ನಂತರ ಒಂಭತ್ತು ವರ್ಷಗಳಲ್ಲಿ 100 ಲಕ್ಷ ಕೋಟಿ ರೂ. ಸಾಲ ಹೆಚ್ಚಾಗಿದೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯ ಶ್ರೀನಟೆ ಆರೋಪಿಸಿದ್ದಾರೆ.

2014ರಲ್ಲಿ ದೇಶದ ಸಾಲದ ಪ್ರಮಾಣ 55 ಲಕ್ಷ ಕೋಟಿ ರೂ. ಆಗಿತ್ತು. ಅದೀಗ 155 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಶ್ವೇತಪತ್ರ ಹೊರಡಿಸಬೇಕು ಎಂದವರು ಆಗ್ರಹಿಸಿದ್ದಾರೆ.

## ಉಚಿತ ಬಸ್ : ಹರಿಹರದಲ್ಲಿ ಇಂದು ಚಾಲನೆ

ಮಹಿಳೆಯರ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಗೆ ನಗರದ ಬಸ್ ನಿಲ್ದಾಣದಲ್ಲಿ ಚಾಲನೆ ನೀಡಲಾಗುವುದು.ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆ. ಅಧ್ಯಕ್ಷತೆಯನ್ನು ಶಾಸಕ ಬಿ.ಪಿ. ಹರೀಶ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್ ಮತ್ತು ವಿಶೇಷ ಆಹ್ವಾನಿತರಾಗಿ ತಹಶೀಲ್ದಾರ್ ಪೃಥ್ವಿ ಸಾನಿಕಂ, ತಾಪಂ ಇಓ ರವಿ.ಎನ್. ಸಿಪಿಐ ಸತೀಶ್ ಕುಮಾರ್, ಪೌರಾಯುಕ್ತ ಐಗೂರು ಬಸವರಾಜ್ ಮತ್ತಿತರರು ಉಪಸ್ಥಿತರಿರಲಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಕಾಂಗ್ರೆಸ್ ಸಂಭ್ರಮಾಚರಣೆ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ನುಡಿದಂತೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಚಾಲನೆ ನೀಡುತ್ತಿದ್ದು, ಇಂದು ಮಧ್ಯಾಹ್ನ 3 ಗಂಟೆಗೆ ಮಲೇಬೆನ್ನೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಸುವ ಮಹಿಳೆಯರಿಗೆ ಕಾಂಗ್ರೆಸ್ ವತಿಯಿಂದ ಸಿಹಿ ವಿತರಿಸಿ, ಶುಭ ಹಾರೈಸುವ ಸಂಭ್ರಮಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಸದಸ್ಯ ಸಾಬೀರ್ ಅಲಿ ತಿಳಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಾರ ಭವಿಷ್ಯ

**ದಿನಾಂಕ : 11.06.2023 ರಿಂದ 17.06.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಬೇಳೆಕಾಳು ಅಥವಾ ದಿನಸಿ ವ್ಯಾಪಾರಿಗಳು ಸದ್ಯದ ಪರಿಸ್ಥಿತಿಯಲ್ಲಿ ಹೆಚ್ಚಿನ ಬಂಡವಾಳವನ್ನು ಹೂಡುವುದು ಅಷ್ಟು ಸೂಕ್ತವಲ್ಲ. ಸ್ವಲ್ಪ ಮೈಮರೆತರೂ ಭಾರೀ ನಷ್ಟವುಂಟಾಗಬಹುದು. ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶ ಹಲವು ಬರಲಿದ್ದು, ಆಯ್ಕೆಯಲ್ಲಿ ಗೊಂದಲ ಕಾಣಲಿದೆ. ಸ್ನೇಹಿತರೊಂದಿಗೆ ವ್ಯವಹರಿಸುವಾಗ ಅದರಲ್ಲೂ ಹಣಕಾಸಿನ ವಿಚಾರದಲ್ಲಿ ಬಹಳ ಎಚ್ಚರದಿಂದಿರಿ. ನಿವೃತ್ತಿಯಂಚಿನಲ್ಲಿರುವ ಸರ್ಕಾರಿ ನೌಕರರಿಗೆ ಅನಪೇಕ್ಷಿತವಾಗಿ ದೂರದೂರುಗಳಿಗೆ ವರ್ಗಾವಣೆಯಾಗಬಹುದು. ಹಣಕಾಸಿನ ಪರಿಸ್ಥಿತಿ ಸಾಕಷ್ಟು ಸುಧಾರಿಸಲಿದೆ. ಗುರುಗಳ ಸೇವೆ ಮಾಡಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನಾಟ್ಯಶಾಸ್ತ್ರದಲ್ಲಿ ಪ್ರವೀಣರಾದವರಿಗೆ ವಿದೇಶದಲ್ಲಿ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ಅವಕಾಶಗಳು ದೊರೆಯಲಿವೆ. ಏಕಾಂಗಿಯಾಗಿ ಬದುಕಿನಲ್ಲಿ ಹೋರಾಡುವ ನಿಮಗೆ, ಅತಿಯಾದ ಆತ್ಮಗೌರವ ಹೆಚ್ಚಲಿದೆ. ಆದರೆ ಇದು ದುರಭಿಮಾನವಾಗದಿರಲಿ. ಈ ಹಿಂದೆ ಹೂಡಿದ್ದ ಬಂಡವಾಳವು ಲಾಭವನ್ನು ತರಲಿದೆ. ಸ್ವಂತ ಉದ್ಯಮದಲ್ಲಿ ತುಸು ಹಿನ್ನಡೆಯಾದರೂ ಚಿಂತಿಸಬೇಕಾಗಿಲ್ಲ. ಹಣಕಾಸಿನ ಸ್ಥಿತಿಗತಿ ಸಾಮಾನ್ಯವಾಗಿರುವುದರಿಂದ, ಖರ್ಚುವೆಚ್ಚಗಳ ಮೇಲೆ ಹಿಡಿತ ಮಾಡುವುದು ಉತ್ತಮ. ಹಿರಿಯರನ್ನು ಗೌರವಿಸಿ. ಗೋ ಸೇವೆ ಮಾಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಸಾಹಿತ್ಯ ಪ್ರಚಾರಕರಿಗೆ ಸಾಮಾಜಿಕ ಬೆಂಬಲ ದೊರೆಯಲಿದೆ. ಮುದ್ರಣಕಾರರಿಗೆ ತೆರಪಿಲ್ಲದ ಕೆಲಸವಾಗಲಿದೆ. ಸಾಧುಸಂತರ ದರ್ಶನಕ್ಕೋಸ್ಕರ ದೂರದೂರುಗಳಿಗೆ ಪರಿವಾರ ಸಮೇತ ಪ್ರಯಾಣ ಮಾಡುವಿರಿ. ಬೆಟ್ಟದಂತೆ ಬಂದಿರುವ ಕಷ್ಟಗಳು ಮಂಜಿನಂತೆ ಕರಗಿಹೋಗಲಿವೆ. ಕುಟುಂಬಕ್ಕೆ ಸಂಬಂಧಿಸಿದ ವಿಚಾರವೊಂದರ ಬಗ್ಗೆ ಮನೆಯಲ್ಲಿ ಹಿರಿಯರೊಂದಿಗೆ ಗಂಭೀರ ಚರ್ಚೆ ನಡೆಯಲಿದೆ. ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡುವ ನೌಕರರಿಗೆ ಅವರ ಕರ್ತವ್ಯದಲ್ಲಿ ತೀವ್ರವಾದ ಗೊಂದಲ ಕಂಡುಬರಲಿದೆ.ಮಕ್ಕಳ ವಿದ್ಯಾಭ್ಯಾಸವನ್ನು ಅಲಕ್ಷಿಸುವುದು ಒಳ್ಳೆಯದಲ್ಲ. ಬುಧ-ಗುರು-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಸ್ವಂತ ಹೋಟೆಲ್ ಉದ್ಯಮವನ್ನು ಆರಂಭಿಸಲು ಇಚ್ಛಿಸುವವರು, ಕೆಲಕಾಲ ಆರಂಭಿಕ ತರಬೇತಿಯನ್ನು ಪಡೆಯುವುದು ಮೇಲು. ಹಿರಿಯರು ಕಾಲಕ್ಕೆ ತಕ್ಕಂತೆ ಬದಲಾವಣೆಗೆ ಹೊಂದಿಕೊಳ್ಳದೇ ಬೇರೆ ಮಾರ್ಗವಿಲ್ಲ. ಯುವಕರು ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಮನೆಮಂದಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವರು. ಅನಾವಶ್ಯಕ ವಿವಾದಗಳಿಂದ ಸಾಮಾಜಿಕವಾಗಿ ದೂರ ಉಳಿಯುವುದು ಉತ್ತಮ. ಪ್ರೇಮಿಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ಮೂಡಲಿದ್ದು, ಸಂಬಂಧಗಳು ಬೇರ್ಪಡಲಿವೆ. ಹೆಚ್ಚಿನ ಆದಾಯದ ನಿರೀಕ್ಷೆಬೇಡ. ಆರೋಗ್ಯವನ್ನು ಅಲಕ್ಷಿಸದಿರಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘು, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಯುವಕರು ಬದುಕಿನಲ್ಲಿ ಉನ್ನತಿಯನ್ನು ಹೊಂದಬೇಕೆಂದರೆ, ಕಠಿಣ ಶ್ರಮ ಅವಶ್ಯ. ವ್ಯವಹಾರದಲ್ಲಿ ಗೊಂದಲ ಮೂಡಿದಾಗ, ಅನುಭವಿಗಳ ಸಲಹೆ ಪಡೆಯುವುದು ಮೇಲು. ರೈತಾಪಿ ಜನರಿಗೆ ಬೇಸಾಯದಲ್ಲಿ ಕಾರ್ಮಿಕರ ಅಭಾವ ಕಂಡುಬರಲಿದೆ. ಹೈನುಗಾರಿಕೆ ಲಾಭದಾಯಕವಾಗಲಿದೆ. ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಹರಸಾಹಸಪಡುವಿರಿ. ಆಸ್ತಿ ವಿಭಾಗದ ವಿಚಾರ ಮತ್ತೆ ಮುನ್ನೆಲೆಗೆ ಬರಲಿದೆ. ಹಿರಿಯರು ಹೊತ್ತ ಹರಕೆಗಳನ್ನು ಆದಷ್ಟು ಬೇಗ ತೀರಿಸಲು ಪ್ರಯತ್ನಿಸಿ. ಮತ್ತೊಬ್ಬರ ವಾಹನಗಳನ್ನು ಚಾಲಿಸಲು ಹೋದಲ್ಲಿ ತೊಂದರೆ ತಪ್ಪಿದ್ದಲ್ಲ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ವೃತ್ತಿಜೀವನದಲ್ಲಿ ಆಪಾದನೆಗಳು ಸಹಜವಾಗಿ ಬರಲಿವೆ. ಮರ ಮುಟ್ಟುಗಳ ವಹಿವಾಟು ಜೋರಾಗಿಯೇ ನಡೆದು, ಹೆಚ್ಚಿನ ಲಾಭವಾಗಲಿದೆ. ನಿಮ್ಮ ಹೊಸ ಯೋಜನೆಗಳಿಗೆ ಸೋದರಿಯಿಂದ ಸಂಪೂರ್ಣ ಬೆಂಬಲ ದೊರೆಯಲಿದೆ. ಆದಾಯದ ಮೂಲದಲ್ಲಿ ಹೆಚ್ಚಳ ಕಂಡುಬರಲಿದ್ದು, ಹಣಕಾಸಿನ ಸಮಸ್ಯೆ ತಕ್ಕಮಟ್ಟಿಗೆ ಬಗೆಹರಿಯಲಿದೆ.ಷೇರುಮಾರುಕಟ್ಟೆಯಲ್ಲಿ ಹೂಡಿಕೆಮಾಡಲು ಇದು ಸಕಾಲವಲ್ಲ. ಮಕ್ಕಳ ಮುಂದಿನ ಭವಿಷ್ಯದ ಬಗ್ಗೆ ಈಗಲೇ ಒಂದು ಗಟ್ಟಿ ನಿರ್ಧಾರ ತೆಗೆದು ಕೊಳ್ಳುವುದು ಉತ್ತಮ. ಶಸ್ತ್ರಚಿಕಿತ್ಸಾ ವೈದ್ಯರಿಗೆ ಬೇಡಿಕೆ ಹೆಚ್ಚಲಿದೆ. ನೆರೆಹೊರೆಯ ರೊಂದಿಗೆ ಸೌಹಾರ್ದತೆಯಿಂದ ವರ್ತಿಸಿ. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಆರಂಭದಲ್ಲಿ ಬಹು ಉತ್ಸಾಹದಿಂದ ಕೆಲಸ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದ ನಿಮಗೆ, ಈ ವಾರ ಹೆಚ್ಚಿನ ಸೋಮಾರಿತನ ಆವರಿಸಿಕೊಳ್ಳಲಿದೆ. ಹಣಕಾಸಿನ ಹರಿವಿನಲ್ಲಿ ತುಸು ಕೊರತೆ ಕಂಡುಬಂದರೂ, ದೈನಂದಿನ ಜೀವನಕ್ಕೇನೂ ಕೊರತೆಯಿಲ್ಲ. ಹದಗೆಟ್ಟಿದ್ದ ಮಡದಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣಲಿದೆ. ಬಂಧುಗೊಳೊಂದಿಗೆ ಉಂಟಾಗಬಹುದಾದ ವಾಗ್ವಾದ, ನಿಮ್ಮ ಘನತೆಗೆ ಧಕ್ಕೆಯುನ್ನುಂಟುಮಾಡೀತು. ಮನೆಯಲ್ಲಿ ಪೂರ್ವಿಕರು ನಡೆಸಿಕೊಂಡು ಬರುತ್ತಿದ್ದ ಕಟ್ಟಳೆಗಳಿಗೆ ಮರುಚಾಲನೆ ಬರಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ವೃತ್ತಿಯಲ್ಲಿ ಮುಂಬಡ್ತಿ ಪಡೆಯಬೇಕಾದರೆ, ಹೆಚ್ಚಿನ ಜವಾಬ್ದಾರಿಯನ್ನು ಹೊರಲಿಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಮನೆಯ ಹೆಚ್ಚಿನ ಖರ್ಚು-ವೆಚ್ಚವನ್ನು ಭರಿಸಲು, ಹೊಸ ಆದಾಯದ ಮೂಲವನ್ನು ಹುಡುಕುವಿರಿ. ರಾಜಕಾರಣಿಗಳು ಪಕ್ಷದಲ್ಲಿ ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಲು ವರಿಷ್ಠರ ಮರ್ಜಿ ಹಿಡಿಯ ಬೇಕಾದೀತು. ಕೃಷಿಕ ಮಿತ್ರರಿಗೆ ಬಿಡುವಿಲ್ಲದ ಕೆಲಸವಾಗಲಿದೆ. ಹೈನುಗಾರಿಕೆ ಲಾಭದಾಯಕವಾಗಲಿದೆ. ವಿದೇಶದಲ್ಲಿ ಓದಬೇಕೆಂಬ ವಿದ್ಯಾರ್ಥಿಗಳ ಹಂಬಲಕ್ಕೆ ಸಾಮಾಜಿಕ ನೆರವು ದೊರೆಯಲಿದೆ. ಮಂಗಳ-ಗುರು-ಶುಕ್ರ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಬಹಳ ದಿನಗಳಿಂದ ಕನಸು ಕಾಣುತ್ತಿದ್ದ ನಿಮಗೆ ಈಗ ಸಾಕಾರಗೊಳಿಸಲು ಉತ್ತಮ ಅವಕಾಶ ಬರಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳಾಗಿದ್ದರೂ, ಹೆಚ್ಚಿನ ಶ್ರಮಪಡದೆ ವಿಧಿಯಿಲ್ಲ. ಸೋದರಿಯ ಮನೆಯಲ್ಲಿ ನಡೆಯಲಿರುವ ಮಂಗಳ ಕಾರ್ಯದಲ್ಲಿ ಭಾಗವಹಿಸುವಿರಿ. ನಿಮ್ಮ ನಡೆ, ನುಡಿಗಳಲ್ಲಿ ಕಂಡುಬರುತ್ತಿರುವ ವ್ಯತ್ಯಾಸವನ್ನು ಸುಧಾರಿಸಿಕೊಳ್ಳದೇ ಹೋದಲ್ಲಿ, ಜನರು ನಿಮ್ಮಿಂದ ದೂರ ಸರಿಯುವರು. ಆದಾಯ ಸಾಧಾರಣವಾಗಿರುವುದರಿಂದ ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋಗಬೇಡಿ. ಭಾನು-ಸೋಮ-ಗುರು-ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಹಣಕಾಸಿನ ನಿರ್ವಹಣೆಯನ್ನು ಜಾಣತನದಿಂದ ನಿಭಾಯಿಸಿದಲ್ಲಿ ಮಾತ್ರ ಆರ್ಥಿಕ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಬಹುದು. ವ್ಯವಹಾರದಲ್ಲಿ ಸ್ನೇಹಿತನಿಗಾಗಿರುವ ಅನ್ಯಾಯವನ್ನು ಸರಿಪಡಿಸಲು, ಪ್ರಾಮಾಣಿಕ ಪ್ರಯತ್ನಮಾಡುವಿರಿ. ಅನಿರೀಕ್ಷಿತವಾಗಿ ಮನಸ್ಸು ಅಧ್ಯಾತ್ಮದ ಕಡೆ ತಿರುಗಲಿದ್ದು, ಯೋಗಾಭ್ಯಾಸದ ಕಡೆ ಒಲವು ತೋರುವಿರಿ.ಸಾಹಿತ್ಯ ರಚನಾಕಾರರಿಗೆ ಬೇಡಿಕೆ ಹೆಚ್ಚಲಿದೆ. ವಿದೇಶದಲ್ಲಿ ವಾಸಿಸುವವರಿಗೆ ಅಲ್ಲಿಯೇ ಸ್ಥಿರಾಸ್ತಿಕೊಳ್ಳುವಯೋಗವಿದೆ. ಹಿರಿಯರ ಆರೋಗ್ಯದ ವಿಚಾರದಲ್ಲಿ ಉದಾಸೀನ ಸಲ್ಲದು. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮನೆಯ ಆಸ್ತಿಗೆ ಸಂಬಂಧಿಸಿದ ಕಳೆದುಹೋಗಿದ್ದ ಅಮೂಲ್ಯ ದಾಖಲೆಗಳು ಮರಳಿ ಸಿಗಲಿವೆ. ಇದರಿಂದ ಕೌಟುಂಬಿಕ ಸಮಸ್ಯೆಗಳು ಸುಲಭವಾಗಿ ಬಗೆಹರಿಯಲಿವೆ. ನಿಮ್ಮ ಹೊಸಯೋಜನೆಗಳಿಗೆ ತಂದೆಯವರ ಕಡೆಯಿಂದ ಆರ್ಥಿಕ ನೆರವು ದೊರೆಯಲಿದೆ.ಪ್ರಯಾಣ ಮಾಡಲೇಬೇಕಾದ ಪ್ರಸಂಗ ಬರಲಿದ್ದು. ಅದಕ್ಕೆ ಬೇಕಾದ ಪೂರ್ವಸಿದ್ಧತೆ ಚೆನ್ನಾಗಿರಲಿ. ಆರ್ಥಿಕ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಲಿದೆ. ಸಾಕುಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ಅಪಾಯವಾಗುವ ಸಂಭವವಿದೆ. ಕುಲದೇವತಾರಾಧನೆ ಮಾಡಿ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮನೆಯನ್ನಾಗಲೀ ಅಥವಾ ಆಸ್ತಿಯನ್ನಾಗಲೀ ಖರೀದಿಸುವಾಗಲಿ ಮತ್ತೊಮ್ಮೆ ಆಲೋಚಿಸುವುದು ಮೇಲು. ಧನಾದಾಯವು ಉತ್ತಮವಾಗಿದ್ದರೂ, ಉಳಿತಾಯದ ಮಾತು ದೂರವಾಗಲಿದೆ. ಸ್ನೇಹಿತರ ಭಾವನೆಗಳಿಗೆ ಬೆಲೆ ಕೊಟ್ಟು ನಡೆದಲ್ಲಿ ನಿಮ್ಮ ಗೌರವ ಹೆಚ್ಚುವುದು. ಸಾಧನೆಯ ಹಾದಿಯಲ್ಲಿ ಅನೇಕ ಕಂಟಕಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿ ಕಂಡುಬರಲಿದೆ. ಖರ್ಚಿಗೆ ಕಡಿವಾಣ ಹಾಕುವುದೊಂದೇ ಉಳಿತಾಯಕ್ಕಿರುವ ದಾರಿ. ಗುರುಗಳನ್ನು ಆರಾಧಿಸಿ. ಭಾನು-ಗುರು-ಶುಕ್ರ-ಶುಭ ದಿನಗಳು.

## ಗೂಡ್ಸೆ ಸುಪುತ್ರ ಎಂದ ಸಚಿವಗೆ ಸಿಬಾಲ್ ತರಾಟೆ

ನವದೆಹಲಿ, ಜೂ. 10 – ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೂಡ್ಸೆ ಅವರನ್ನು ಭಾರತದ ಸುಪುತ್ರ ಎಂದು ಹೇಳಿದ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರನ್ನು ರಾಜ್ಯಸಭಾ ಸದಸ್ಯ ಕಪಿಲ್ ಸಿಬಾಲ್ ತರಾಟೆಗೆ ತೆಗೆದುಕೊಂಡಿದ್ದಾರೆ. ಗಿರಿರಾಜ್ ಸಿಂಗ್ ಅವರಿಗೆ ಗೂಡ್ಸೆ ಭಾರತದ ಸುಪುತ್ರ ಆಗಿರಬಹುದು. ಆದರೆ, ಈ ಹೇಳಿಕೆಯ ನಂತರ ಭಾರತದ ಜನತೆ ಸಚಿವರನ್ನು ಸುಪುತ್ರ ಎನ್ನುವುದಿಲ್ಲ ಎಂದು ಸಿಬಾಲ್ ಹೇಳಿದ್ದಾರೆ. ಹಂತಕ ರನ್ನು ಅವರು ಯಾವ ದೇಶದಲ್ಲಿ ಹುಟ್ಟಿದ್ದಾರೆ ಎಂಬುದರ ಆಧಾ ರದ ಮೇಲೆ ಭೇದ ಮಾಡಲಾ ಗದು. ಸಿಂಗ್ ಹೇಳಿಕೆಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಖಂಡಿಸಲಿದ್ದಾರೆ ಎಂಬ ನಿರೀಕ್ಷೆ ಹೊಂದಿರುವುದಾಗಿ ಸಿಬಾಲ್ ತಿಳಿಸಿದ್ದಾರೆ.

# ತಂಬಾಕು ಬಳಕೆಯಿಂದ ವಾರ್ಷಿಕ 14 ಲಕ್ಷ ಸಾವು

### 'ವಿಶ್ವ ತಂಬಾಕು ರಹಿತ ದಿನಾಚರಣೆ' ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್



**ಹೊನ್ನಾಳಿ**

ಹೊನ್ನಾಳಿ, ಜೂ 10- ತಂಬಾಕು ಸೇವನೆಯಿಂದ ಭಾರತ ದೇಶದಲ್ಲಿ ವಾರ್ಷಿಕ ಸುಮಾರು 14 ಲಕ್ಷದಷ್ಟು ಸಾವುಗಳು ಆಗುತ್ತಿವೆ. ಇವರಲ್ಲಿ ಯುವಕರು ಮತ್ತು ಮಧ್ಯ ವಯಸ್ಕರೇ ಹೆಚ್ಚು ಎಂದು ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಆತಂಕ ವ್ಯಕ್ತಪಡಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹೊನ್ನಾಳಿ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ದಾವಣಗೆರೆ ಜಿಲ್ಲೆ ವತಿಯಿಂದ ಹೊನ್ನಾಳಿ ಹೆಚ್ ಕಡದಕಟ್ಟೆಯ ವಿಜಯ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಾಡಾಗಿದ್ದ 'ವಿಶ್ವ ತಂಬಾಕು ರಹಿತ ದಿನಾಚರಣೆ' ಕಾರ್ಯಕ್ರಮದ ಪ್ರಧಾನ ಉಪನ್ಯಾಸಕರಾಗಿ ಅವರು ಮಾತನಾಡಿದರು.

ನಮ್ಮ ದೇಶದಲ್ಲಿ ಸುಮಾರು 27 ಕೋಟಿಯಷ್ಟು ಮಂದಿ ಧೂಮಪಾನ, ಗುಟ್ಕಾ, ಜರ್ದಾ ಸೇವನೆ ಮುಂತಾದ ವಿವಿಧ ಬಗೆಗಳಲ್ಲಿ ತಂಬಾಕು ಸೇವನೆ ಮಾಡುತ್ತಿದ್ದು, ಇದರಿಂದಾಗಿ ಶ್ವಾಸಕೋಶದ ಕ್ಯಾನ್ಸರ್, ಹೃದಯ ಬೇನೆ, ಪಾರ್ಶ್ವವಾಯು, ದ್ವಿತೀಯ ಬಗೆಯ ಮಧುಮೇಹ ಮುಂತಾದ ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ಬೀಡಿ, ಸಿಗರೇಟಿನ ಹೊಗೆಯಲ್ಲಿ ಸುಮಾರು ಏಳು ಸಾವಿರ ಬಗೆಯ ವಿಷಕಾರಿ ರಾಸಾಯನಿಕಗಳ ಮಿಶ್ರಣವಿದ್ದು, ತಂಬಾಕಿನ ನಿಕೋಟಿನ್ ಚಟ ಹುಟ್ಟಿಸುವ ವಿಷವಾಗಿದೆ. ಇದು ದೇಹವನ್ನು ಪ್ರವೇಶಿಸಿದಾಗ ಹೃದಯದ ಆಮ್ಲಜನಕ ಬಳಕೆ ಹೆಚ್ಚಾಗುತ್ತದೆ. ಇದರಿಂದಾಗಿ ಏನೋ ಒಂದು ಆರಾಮದ ಅನುಭವವಾಗುತ್ತದೆ, ಆದರೆ ಧೂಮಪಾನವು ಶ್ವಾಸಕೋಶವನ್ನು ಸೇರಿ ಅಪಾಯಕಾರಿ ಜೀವಕೋಶಗಳನ್ನು ವೃದ್ಧಿ ಮಾಡುವುದಲ್ಲದೆ ಕ್ಯಾನ್ಸರ್ ಗೆ ಕಾರಣವಾಗುತ್ತಿದೆ ಎಂದರು.

ಶ್ವಾಸಕೋಶದ ಕ್ಯಾನ್ಸರ್‌ಗೆ ಬಲಿಯಾಗುತ್ತಿರುವವರಲ್ಲಿ ಶೇ.90ರಷ್ಟು ಧೂಮಪಾನಿಗಳೇ ಆಗಿದ್ದಾರೆ ಎಂದ ಅವರು, ಧೂಮಪಾನ ಹಾಗೂ ತಂಬಾಕು ಗುಟ್ಕಾ ಸೇವನೆಯಿಂದಾಗಿ ಮೆದುಳಿನ ರಕ್ತನಾಳಗಳ ಒಡೆಯುವಿಕೆ ಆಗಿ ಪಾರ್ಶ್ವವಾಯು ಉಂಟಾಗುವ ಸಂಭವವಿರುತ್ತದೆ, ಹೃದಯಬೇನೆ ಹಾಗೂ ಅಸ್ತಮಾಕ್ಕೂ ಕಾರಣವಾಗಬಹುದು ಎಂದು ಹೇಳಿದರು.

ಪ್ರಾಸ್ತಾವಿಕ ಮಾತುಗಳನ್ನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಹೆಚ್. ಬಾಬು ಅವರು, ದುಶ್ಚಟಗಳನ್ನು ಬಿಡಲು ದೃಢಸಂಕಲ್ಪ ಬೇಕು. ದುರಭ್ಯಾಸಗಳಿಂದ ದೂರವಿರಬೇಕು ಹಾಗೂ ದೈಹಿಕ ಚಟುವಟಿಕೆಗಳಲ್ಲಿ ತೊಡಗಿ ಕೊಳ್ಳಬೇಕು ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಬಿ.ಎಲ್. ಕುಮಾರಸ್ವಾಮಿ ಅವರು, ಸರ್ಕಾರಗಳು ಸರಿಯಾದ ಅಭಿವೃದ್ಧಿ ಪೂರಕ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಲ್ಲಿ ಮಾತ್ರ ಉತ್ತಮ ಭವಿಷ್ಯ ಸಾಧ್ಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಜನಜಾಗೃತಿ ವೇದಿಕೆಯ ನಿಕಟ ಪೂರ್ವ ಅಧ್ಯಕ್ಷ ಸುರೇಶ ಹೊಸಕೇರಿ ಮಾತನಾಡಿ, ಮಾದರಿಯುತ ನಡೆಯಿಂದ ವಿದ್ಯಾರ್ಥಿಗಳು ದೇಶದ ಆಸ್ತಿಯಾಗಬೇಕು ಎಂದರು.

ವಿಜಯ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಎಸ್. ವಸಂತ್ ಕಾರ್ಯಕ್ರಮ ಉದ್ಘಾಟಿಸಿದರು. ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರುಗಳಾದ ನಾಗರಾಜ್ ಕತ್ತಿಗೆ, .ರುದ್ರೇಶ್ ಜಿ.ವಿ, ನಟರಾಜ್ ಎಂ. ಯು.ಲಿಂಗರಾಜ ಹವಳದ್, ಸುನಿಲ್ ಕುಮಾರ್, ದೇವರಾಜ್, ಭಾರತಿ ಮುಂತಾದವರು ಉಪಸ್ಥಿತರಿದ್ದರು.

ಧನುಶ್ರೀ ಪ್ರಾರ್ಥಿಸಿದರು. ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟಿನ ಬಸವರಾಜ್ ನಿರೂಪಿಸಿದರು.

# ಕಾಂಗ್ರೆಸ್‌ನಿಂದಲೂ ಪರ್ಸೆಂಟೇಜ್

**(1ನೇ ಪುಟದಿಂದ)** ಹಿಂದಿನ ಟೆಂಡರ್ ಗಳು ಸೇರಿದಂತೆ ಅನೇಕ ಕಡೆ ಅನುದಾನ ತಡೆ ಹಿಡಿಯಲಾಗಿದೆ. ಬಿಜೆಪಿ ಸರ್ಕಾರ 600 ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿತ್ತು. ಕಳೆದ ಮೇ 6ರಂದು 675 ಕೋಟಿ ರೂಪಾಯಿ ಮೊತ್ತದ ಕಾಮಗಾರಿ ಗಳ ಗುತ್ತಿಗೆದಾರರಿಗೆ ಎಲ್‌ಒಸಿ ರಿಲೀಸ್ ಆಯಿತು. ಆ ಸಂದರ್ಭದಲ್ಲಿ ಒಬ್ಬ ಕಾಂಗ್ರೆಸ್ ಸಂಸದರು ಹೇಳಿದ್ದರಂತೆ, ಯಾವುದೇ ಕಾರಣಕ್ಕೂ ಹಣ ಬಿಡುಗಡೆ ಮಾಡಬೇಡಿ, ನಮ್ಮ ಸರ್ಕಾರ ಬರುತ್ತದೆ ಅಂತ ಹೇಳಿದ್ದರಂತೆ ಅವರು. ಅವರು ಯಾಕೆ ಹೇಳಿದ್ದರು? ಆ ಸಂಸದ ಯಾರು? ಎಂದು ಮಾಜಿ ಮುಖ್ಯಮಂತ್ರಿ ಪ್ರಶ್ನಿಸಿದರು.

675 ಕೋಟಿ ಮೊತ್ತದ ಎಲ್ ಒಸಿ ಹಣ ಯಾಕೆ ಬಿಡುಗಡೆ ಆಗಲಿಲ್ಲ ಎನ್ನುವುದು ಅನುಮಾನಕ್ಕೆ ಕಾರಣ. ಈಗ ಎಲ್‌ಒಸಿ ಬಿಡುಗಡೆ ಆಗಬೇಕು ಅಂದರೆ 5 ಪರ್ಸೆಂಟ್ ಕೊಡಲೇಬೇಕು ಎಂದು ಬೇಡಿಗೆ ಇಟ್ಟಿದ್ದಾರೆ. 40 ಪರ್ಸೆಂಟ್ ಜತೆಗೆ ಹೆಚ್ಚುವರಿಯಾಗಿ 5 ಪರ್ಸೆಂಟ್ ಕೊಟ್ಟರೆ ಹಣ ಬಿಡುಗಡೆ ಮಾಡುತ್ತೇವೆ ಅಂತ ಹೇಳಿದ್ದಾರಂತೆ. ಅಲ್ಲಿಗೆ ಇದು 45 ಪರ್ಸೆಂಟ್ ಸರ್ಕಾರ ಎಂದಾಯಿತಲ್ವೆ ? ಆಗಿರುವ ಕಾಮಗಾರಿಗಳಿಗೆ ಪರ್ಸಂಟೇಜ್ ಕೇಳುತ್ತಿದ್ದಾರೆ, ಇವರು ಸತ್ಯ ಹರಿಶ್ಚಂದ್ರರು ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಇದೇ ಸಂದರ್ಭದಲ್ಲಿ ಅಧಿಕಾರಿಗಳ ವರ್ಗಾವಣೆಗೂ ದರ ನಿಗದಿ ಮಾಡಿದೆ ಎಂದು ಆರೋಪಿಸಿದರು.

ವಿದೇಶಿ ಪ್ರವಾಸದಲ್ಲಿರುವ ಸಚಿವರೊಬ್ಬರ ಇಲಾಖೆಗೆ ವರ್ಗ ಆಗಿರುವ ಹಿರಿಯ ಅಧಿಕಾರಿ ಒಬ್ಬರಿಗೆ ಅಧಿಕಾರ ವಹಿಸಿಕೊಳ್ಳಲು ಸ್ವತಃ ಸಚಿವರೇ ಅವಕಾಶ ನೀಡಿಲ್ಲ, ಯಾಕೆ ? ಎಂದು ನೇರವಾಗಿ ಪ್ರಶ್ನಿಸಿದರು.

ವಿದೇಶಿ ಪ್ರವಾಸದಲ್ಲಿರುವ ಆ ಸಚಿವರು ಯಾರು, ಆ ಸಚಿವರ ಗಮನಕ್ಕೆ ಬಾರದೆಯೇ ಅವರ ಇಲಾಖೆಗೆ ಪೋಸ್ಟಿಂಗ್ ಆದ ಆ ಅಧಿಕಾರಿ ಯಾರು ಎನ್ನುವುದನ್ನು ಬಹಿರಂಗ ಮಾಡಲಿ. ಮೊದಲು ಇವರು ನನ್ನ ಬಗ್ಗೆ ಲಘುವಾಗಿ ಮಾತನಾಡುವುದನ್ನು ನಿಲ್ಲಿಸಲಿ ಎಂದು ಕಿಡಿಕಾರಿದರು.

ಅದಕ್ಕೆ ಸಂಬಂಧಪಟ್ಟ ಮಂತ್ರಿ ವಿದೇಶದಲ್ಲಿ ಇದ್ದಾರೆ. ಮುಖ್ಯಮಂತ್ರಿ ಆದೇಶ ಮಾಡಿದ್ದರೂ, ನಾನು ಬರುವವರೆಗೂ ಅಧಿಕಾರ ತೆಗೆದುಕೊಳ್ಳ ಬೇಡಿ ಅಂತ ತಾಕೀತು ಮಾಡಿದ್ದಾರಂತೆ. ಹಾಗಾದರೆ ಎಷ್ಟು ಹಣ ಕೊಟ್ಟು ಬಂದರು ಈ ಅಧಿಕಾರಿ ಈಗ 'ವರ್ಗಾ ವಣೆ ಜ್ಯೋತಿ' ಕಾರ್ಯಕ್ರಮ ನಡೆಯುತ್ತಿದೆ. ಈ ದಂಧೆ ಬಗ್ಗೆ ಏನು ಹೇಳ್ತಾರೆ ಇವರು. ಎಸಿಬಿ ದಾಳಿಗೆ ಒಳಗಾಗಿದ್ದ ಇನ್ನೊಬ್ಬ ಅಧಿಕಾರಿಯನ್ನು ಮುಖ್ಯಮಂತ್ರಿ ಕಚೇರಿಯಲ್ಲಿಯೇ ಇಟ್ಟುಕೊಂಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿಗಳು ವಾಗ್ದಾಳಿ ನಡೆಸಿದರು.

ಬಿಜೆಪಿ ಸರ್ಕಾರದ 40 ಪರ್ಸೆಂಟ್ ಬಗ್ಗೆ ಮಾತಾಡಿದ್ದರು ಇವರು. ಹಾದಿಬೀದಿಯಲ್ಲಿ ಜಾಗಟೆ ಹೊಡೆದುಕೊಂಡು ಪ್ರಚಾರ ಮಾಡಿದರು. ಈಗ ನೋಡಿದರೆ ಅಧಿಕಾರಿಗಳ ವರ್ಗಾವಣೆ ದಂಧೆ ಶುರು ಮಾಡಿಕೊಂಡಿದ್ದಾರೆ. 40 ಪರ್ಸೆಂಟ್ ಎಂದು ಪುಂಗಿ ಬಿಟ್ಟ ಇವರು ಆ ಆರೋಪವನ್ನು ಸಾಬೀತು ಮಾಡಿದರಾ? ಎಂದು ಅವರು ಪ್ರಶ್ನಿಸಿದರು.

# ಸಾಧಕರಲ್ಲಿ ಶೇ.40 ರಷ್ಟು ಇಂಜಿನಿಯರ್‌ಗಳು

**(1ನೇ ಪುಟದಿಂದ)** ಪಡೆಯುವ ಸಾಧ್ಯತೆಯೂ ಇರುತ್ತದೆ. ಆದರೆ, ರಿಸ್ಕ್ ತೆಗೆದುಕೊಳ್ಳಬಾರದು ಎಂದು ದೊಡ್ಡ ಕಂಪನಿಯ ಉದ್ಯೋಗ ಹುಡುಕಿಕೊಂಡು ಹೋಗುವ ಮನೋಭಾವದಿಂದ ಹಿಂದೆ ಬೀಳುತ್ತಿದ್ದಾರೆ ಎಂದವರು ವಿಷಾದಿಸಿದರು.

ಮತ್ತೊಂದೆಡೆ ಸಾಕ್ಷರರಲ್ಲದವರು ಹಾಗೂ ಕಡಿಮೆ ಓದಿದವರೂ ಜೀವನದಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವದಿಂದ ದೊಡ್ಡ ಉದ್ಯಮಿಗಳಾಗಿದ್ದಾರೆ. ಇಂಜಿನಿಯರ್‌ಗಳಾದವರು ತಮ್ಮ ಮನೋಭಾವ ಬದಲಿಸಿಕೊಂಡರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿ ದಾವಣಗೆರೆ ವಿ.ವಿ. ಮೌಲ್ಯಾಂಕನ ಕುಲಸಚಿವ ಡಾ. ಕೆ. ಶಿವಶಂಕರ್ ಮಾತನಾಡಿ, ಕೃತಕ ಬುದ್ಧಿವಂತಿಕೆ, ಬ್ಲಾಕ್‌ಚೈನ್, ಸೈಬರ್, ಡಾಟಾ ಹಾಗೂ ಇಂಧನ ವಲಯಗಳು ಭವಿಷ್ಯವನ್ನು ರೂಪಿಸುತ್ತಿವೆ. ಈ ವಲಯಗಳಿಗೆ ಇಂಜಿನಿಯರ್‌ಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ವೇದಿಕೆಯ ಮೇಲೆ ಬಿ.ಐ.ಇ.ಟಿ. ನಿರ್ದೇಶಕ ವೈ. ವೃಷಭೇಂದ್ರಪ್ಪ, ಪ್ರಾಂಶುಪಾಲ ಹೆಚ್.ಬಿ. ಅರವಿಂದ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಎಸ್. ಕುಮಾರಪ್ಪ, ಎಸ್. ಸುರೇಶ್, ಸಿ.ಆರ್. ನಿರ್ಮಲ, ಮಾನವೇಂದ್ರ, ಬಿ. ಪೂರ್ಣಿಮ, ಜಿ.ಎಸ್. ಸುನಿತಾ, ದೇವೇಂದ್ರಪ್ಪ, ಸಿ.ಎಂ. ಕಲ್ಲೇಶಪ್ಪ ಮತ್ತಿತರರು ಉಪಸ್ಥಿತರಿದ್ದರು.

ದಿವ್ಯ ಹಿರೇಮಠ್ ಪ್ರಾರ್ಥಿಸಿದರು. ಎ.ಜಿ. ಶಂಕರಮೂರ್ತಿ ಸ್ವಾಗತಿಸಿದರು. ವಿಶ್ವನಾಥ್ ಹಾಗೂ ಶ್ರಾವಣಿ ನಿರೂಪಿಸಿದರು.

# ಇರುವ ಅವಕಾಶಗಳನ್ನು ಗುರುತಿಸಿ, ಗುಣಾತ್ಮಕ ಬಳಕೆ ಮಾಡಿಕೊಳ್ಳುವುದೇ 'ಉದ್ಯಮಶೀಲತೆ'

### ಹರಿಹರ ಸ.ಕಾಲೇಜಿನ ಕಾರ್ಯಕ್ರಮದಲ್ಲಿ ಉದ್ಯಮಿ ಹೆಚ್.ಎನ್.ಬಸವರಾಜ್ ವಿಶ್ಲೇಷಣೆ




ಹರಿಹರ, ಜೂ.10- ವೃತ್ತಿಯಲ್ಲಿ ಗೌರವ ಮತ್ತು ಸಮಾಜದ ಎಲ್ಲಾ ಸ್ತರಗಳಲ್ಲೂ ಗೌರವವನ್ನು ಪಡೆದರೆ ಆ ವ್ಯಕ್ತಿ ಯಶಸ್ಸು ಸಾಧಿಸಿದ ಹಾಗೆ. ಅಲ್ಲದೇ ಉದ್ಯಮದಲ್ಲಿ ಕಾರ್ಯ ನಿರ್ವಹಿಸುವ ಉದ್ಯೋಗಿ ತೃಪ್ತನಾದರೆ ಉದ್ಯಮವೂ ಯಶಸ್ಸು ಕಂಡ ಹಾಗೆ ಎಂದು ಖ್ಯಾತ ಉದ್ಯಮಿ ಹಾಗೂ ಪಿ.ಎಸ್.ಕೆ ಫಾರ್ಮಾ ಚೇರ್ಮನ್ ಹೆಚ್.ಎನ್. ಬಸವರಾಜ್ ಅಭಿಪ್ರಾಯಿಸಿ ದರು.

ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐ.ಕ್ಯೂ.ಎಸ್.ಸಿ ಹಾಗೂ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣೆ ವಿಭಾಗದ ಸಹಯೋಗದಲ್ಲಿ ಇಂದು ಜರುಗಿದ 'ಉದ್ಯಮಶೀಲತೆ ಮತ್ತು ಉದ್ಯೋಗಶೀಲತೆ' ಎಂಬ ವಿಷಯವಾಗಿ ನಡೆದ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಉದ್ಯಮಶೀಲತೆ ಎಂಬುದು ಇರುವ ಅವಕಾಶಗಳನ್ನು ಗುರುತಿಸಿ, ಅವುಗಳನ್ನು ಗುಣಾತ್ಮಕ ಬಳಕೆ ಮಾಡಿಕೊಳ್ಳುವ ಪ್ರಕ್ರಿಯೆಯಾಗಿದೆ ಎಂದು ಯುವಕರಿಗೆ ಮನವರಿಕೆ ಮಾಡಿದರು.

ಜನರೊಂದಿಗಿನ ಉತ್ತಮ ಸಂಪರ್ಕ, ಮಾರುಕಟ್ಟೆಯ ಬೇಡಿಕೆ, ಗುಣಮಟ್ಟದ ಉತ್ಪನ್ನಗಳ ಪೂರೈಕೆ ಹಾಗೂ ಕಲಿಕೆಯ ಸಮಯದ ತಪ್ಪುಗಳು ಮರುಕಳಿಸದಂತೆ ಗಮನ ವಹಿಸುವುದು ಉದ್ಯಮಶೀಲತೆಗೆ ಇರುವ ಗಣನೀಯ ಅಂಶಗಳಾಗಿವೆ. ಯಶಸ್ಸು ಕಾಣಲು ಕಳ್ಳದಾರಿ ಅಥವಾ ಅಡ್ಡದಾರಿಗಳಿಲ್ಲ. ಪರಿಶ್ರಮ ಮತ್ತು ಆಸಕ್ತಿ ಎಂಬುದು ಯಶಸ್ಸು ಕಾಣಲು ಇರುವ ಪ್ರಮುಖ ದಾರಿಗಳು ಎಂದು ವಿದ್ಯಾರ್ಥಿಗಳಿಗೆ ಸ್ಫೂರ್ತಿ ದಾಯಕವಾಗಿ ಮನವರಿಕೆ ಮಾಡಿಕೊಟ್ಟರು.

ಐಸಿಎಐನ ಪರೀಕ್ಷೆಯಲ್ಲಿ ಸಾಧನೆ ಮಾಡಿರುವ ಕುಮಾರಿ ರತ್ನಕುಮಾರಿ, ಪದವಿ ನಂತರ ಉನ್ನತ ವ್ಯಾಸಂಗಕ್ಕೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇರುವ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದರು.

ಕಾಲೇಜ್‌ನ ಪ್ರಾಂಶುಪಾಲ ಪ್ರೊ. ಹೆಚ್.ವಿರುಪಾಕ್ಷಪ್ಪ ಅಧ್ಯಕ್ಷತೆ ವಹಿಸಿದ್ದರು. ಐ.ಕ್ಯೂ.ಎಸ್.ಸಿ ಸಂಯೋಜಕ ಪ್ರೊ.ಜಿ.ಎಸ್.ಸುರೇಶ್ ಮಾತ ನಾಡಿದರು. ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣೆ ವಿಭಾಗದ ಮುಖ್ಯಸ್ಥ ಡಾ.ಕೆ.ಎ.ಬಾಬು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಾಯಕ ಪ್ರಾಧ್ಯಾಪಕ ರಾದ ಮಂಜುನಾಥ ನರಸಗೊಂಡ, ಡಾ.ದ್ರಾಕ್ಷಾಯಿಣಿ, ಲಕ್ಷ್ಮಣನಾಯ್ಕ ಮತ್ತಿತರರು ಉಪಸ್ಥಿತರಿದ್ದರು. ಬಿ.ಕಾಂ ಪದವಿ ವಿದ್ಯಾರ್ಥಿನಿ ಕು. ಸುಮಾ ಕುಂಬಳೂರು ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಅನಂತನಾಗ್ ಸ್ವಾಗತಿಸಿದರು. ಅಧ್ಯಾಪಕಿ ಶ್ರೀಮತಿ ಶ್ವೇತಾ ಕಾರ್ಯಕ್ರಮ ನಿರ್ವಹಿಸಿ, ವಂದಿಸಿದರು.

# ಶಿರಮಗೊಂಡನಹಳ್ಳಿಯಲ್ಲಿ ಗಂಗಾ ಪರಮೇಶ್ವರಿ ಜಯಂತಿ



ದಾವಣಗೆರೆ, ಜೂ. 10- ಸಮೀಪದ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಶ್ರೀ ಗಂಗಾಪರಮೇಶ್ವರಿ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಮಳೆ-ಬೆಳೆ ಸಮೃದ್ಧಿಯಾಗಿ ರೈತರ ಬಾಳು ಹಸನಾಗಲೆಂದು ಪ್ರಾರ್ಥಿಸಲಾಯಿತು.

ಈ ಸಂದರ್ಭದಲ್ಲಿ ಗಂಗಾಮತ ಸಮಾಜದ ಹಿರಿಯರಾದ ಜಯಪ್ಪ, ಶಿವಮೂರ್ತಿ, ಸುಮಂಗಲಿಯರಾದ ಭಾರತಿ, ರೇಣುಕಾ, ಸುಷ್ಮಾ ಪ್ರೇಮ, ಸರಿತಾ, ರೇಣುಕಾ, ಮಾಲತಿ, ಕಮಲಮ್ಮ ಮಾನಸ, ಪ್ರೀತಿ, ವಾಣಿಶ್ರೀ, ಪುಷ್ಪ, ಶೋಭಕ್ಕ, ಸುಷ್ಮಾ ಹಾಗೂ ಪ್ರಮುಖರಾದ ಮಂಜುನಾಥ್, ಮೋಹನ್ ಕುಮಾರ್, ರಮೇಶ್ ಚಂದ್ರ ಬಾಬು, ರಮೇಶ್, ಮಾಲತೇಶ್, ವಿಜಯ್, ಪ್ರಶಾಂತ್, ಗಜೇಂದ್ರ, ರಾಜು, ಲಕ್ಷ್ಮಣ, ಚೇತನ್, ಗೋರಪ್ಪರ ಮಹಾಂತೇಶ್, ಜೆ.ಉಮೇಶ್ ವಕೀಲರು ಹಾಜರಿದ್ದರು.

## ಸಚಿವರಿಂದ ಪೆಟ್ಟಿಗೆ

**(1ನೇ ಪುಟದಿಂದ)** ಶಸ್ತ್ರಗಳನ್ನು ಪೊಲೀಸರಿಂದ ಲೂಟಿ ಮಾಡಲಾಗಿತ್ತು. ಜನರು ಈ ಶಸ್ತ್ರಗಳನ್ನು ಮರಳಿಸಬೇಕೆಂದು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಬ್ಬರೂ ಮನವಿ ಮಾಡಿದ್ದಾರೆ.

ಭದ್ರತಾ ಪಡೆಗಳು ಕಳೆದ ಶುಕ್ರವಾರ ನಡೆಸಿದ ಕಾರ್ಯಾಚರಣೆಯಲ್ಲಿ ಕನಿಷ್ಠ 35 ಶಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

## ಕಾರ್ಯಾಧ್ಯಕ್ಷ: ಪ್ರಫುಲ್, ಸುಪ್ರಿಯ

**(1ನೇ ಪುಟದಿಂದ)** ವಿರುದ್ಧ ಬಂಡಾಯ ಎದ್ದು ಬಿಜೆಪಿ ಜೊತೆ ಕೈ ಜೋಡಿಸಿದ್ದರು.

ಉಪಮುಖ್ಯಮಂತ್ರಿಯಾಗಿ ಅವರಿಗೆ ಪ್ರಮಾಣ ವಚನ ಬೋಧಿಸಲಾಗಿತ್ತು. ಆದರೆ, ನಂತರ ಅವರು ಬಂಡಾಯ ಕೈ ಬಿಟ್ಟಿದ್ದರು.

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
**Numero Astrologer & Palmistry**



**ವಂಶಪಾರಂಪರಿಕ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ಸ್ಪೆಷಲಿಸ್ಟ್, ಇಷ್ಟಪಟ್ಟವರು ನಿಮ್ಮಂತಗಲು,**
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 5 ದಿನಗಳೊಳಗೆ ಪರಿಹಾರ ಮಾಡುತ್ತಾರೆ. ಇಂದೇ ಭೇಟಿ ಕೊಡಿ

ವಿಳಾಸ: **ಪಂ. ಜಿ.ವಿ. ಭಟ್ಟರ್**
ಆಹಾರ್ ಹೋಟೆಲ್, ಗಾಂಧಿ ಸರ್ಕಲ್, ದಾವಣಗೆರೆ.
ಮೊಬೈಲ್ : 94481 78626, 89716 99826

## ಸಾರ್ವಜನಿ ಪಕ್ರಟಣೆ

ನನ್ನ ಕಕ್ಷಿದಾರರಾದ ದಾವಣಗೆರೆ ಸಿಟಿ ವಾಸಿ **ಜೆ.ವಿ. ಮಂಜುಳ ರೆಡ್ಡಿ ಕೋಂ ಲೇಟ್ ಪಿ. ರಾಮರೆಡ್ಡಿ** ದಾವಣಗೆರೆ ವಾಸಿಗಳು ಇವರು ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು ಟೌನ್ ವಾಸಿಗಳಾದ **ಎಸ್.ಹೆಚ್. ಮಹಮದ್ ಸಾಬ್ ಬಿನ್ ಮಹಮದ್ ಹಯಾತ್ ಸಾಬ್** ಇವರು ಸ್ವಂತಕ್ಕು ಮತ್ತು ಈ ಕೆಳಕಂಡ ಜಮೀನಿನ ಖಾತೆದಾರರ ಜಿ.ಪಿ.ಎ ಹೋಲ್ಡರ್ ಆಗಿ ಇವರುಗಳಿಂದ ಈ ಕೆಳಗಿನ ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಿದ್ದು, ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳಿಗೆ ಸಂಬಂಧಿಸಿದ ಯಾವುದೇ ರೀತಿಯ ಕ್ರಯ, ದಾನ, ಅಡಮಾನ, ಭೋಗ್ಯ, ಬಾಡಿಗೆ, ಗುತ್ತಿಗೆ, ಜೀವನಾಂಶ ಮೈನರ್ ಹಕ್ಕು, ಪಾಲು, ಶೀರ್ಷಿಕೆ ಇತ್ಯಾದಿ ಹಕ್ಕು, ಆಸಕ್ತಿ ಇದ್ದಲ್ಲಿ, ದಾವೆ ವ್ಯಾಜ್ಯಗಳಿದ್ದಲ್ಲಿ ಹಾಗೂ ಮಾರಾಟದ ಬಗ್ಗೆ ಕರಾರು ಜಿ.ಪಿ.ಎ ಹಾಗೂ ಇತರೆ ತಂಟೆ-ತಕರಾರು/ಅಭ್ಯಂತರ ಹಿತಾಸಕ್ತಿಗಳಿದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬಹುದು. ತಪ್ಪಿದ್ದಲ್ಲಿ ಯಾರಿಂದಲೂ, ಯಾವುದೇ ವಿಧವಾದ ತಂಟೆ ತಕರಾರು/ಅಭ್ಯಂತರ ಇಲ್ಲವೆಂದು ಪರಿಗಣಿಸಲಾಗುವುದು.

**ಷೆಡ್ಯೂಲ್**

ಜಗಳೂರು ಸಬ್ ರಿಜಿಸ್ಟರ್ ಕಛೇರಿ ವ್ಯಾಪ್ತಿಗೆ ಒಳಪಟ್ಟ ಜಗಳೂರು ತಾ. ಬಿಳಿಚೋಡು ಹೋ. ಬಗ್ಗೇನಹಳ್ಳಿ ಗ್ರಾಮದ ರಿ.ಸರ್ವೆ ನಂ. 9/7ರಲ್ಲಿ 7 ಎಖರೆ 20 ಗುಂಟೆ ಉಳ್ಳ ಜಮೀನು. **ಚಕ್ಕುಬಂದಿ : ಪೂರ್ವಕ್ಕೆ :** ಹರಿಶ್ಚಂದ್ರ ನಾಯ್ಕ, ಇವರ ಜಮೀನು, **ಪಶ್ಚಿಮಕ್ಕೆ :** ಜೆ.ಹೆಚ್. ದಾದಾಪೀರ್ ಇವರ ಜಮೀನು. **ಉತ್ತರಕ್ಕೆ :** ಹರಿಶ್ಚಂದ್ರ ನಾಯ್ಕ, ಇವರ ಜಮೀನು. **ದಕ್ಷಿಣಕ್ಕೆ :** ವೈಶ್ಯಗೊಂಡನಹಳ್ಳಿ ಚೌಡಪ್ಪನವರ ಜಮೀನು ಈ ಸಾರ್ವಜನಿಕ ಪ್ರಕಟಣೆಗೆ ಒಳಪಟ್ಟಿರುತ್ತದೆ.

**ಕಕ್ಷಿದಾರರ ಪರ ವಕೀಲರು**
**ಪ್ರಸನ್ನಕುಮಾರ್ ಡಿ.ಪಿ. ವಕೀಲರು,**
#391/1-71 ಪಾರ್ವತಿ ಲಕ್ಷ್ಮಿ ಲೇಔಟ್, ಎ ಬ್ಲಾಕ್, ದಾವಣಗೆರೆ.
**ಮೊ : 94482 33144, 94481 80019**

## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ - 577001.
**ಫೋ ನಂ. 08192-256107, 94498 19322.**

### ನೇಮಕಾತಿ ಅಧಿಸೂಚನೆ

**ಸರ್ಕಾರಿ ಆದೇಶ ಸಂಖ್ಯೆ : ಯು.ಬಿ.ಸಿ/7/ಯು.ಸಿ.ಎಸ್/159/2022-23, ದಿನಾಂಕ 09.02.2023.**

ಬ್ಯಾಂಕಿನಲ್ಲಿ ಖಾಲಿ ಇರುವ ಇಲಾಖೆಯವರು ಅನುಮೋದಿಸಲ್ಪಟ್ಟ 12 ಕಿರಿಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1) **ಹುದ್ದೆಗಳ ಸಂಖ್ಯೆ:** 12 ಕಿರಿಯ ಸಹಾಯಕ ಹುದ್ದೆಗಳು (ಪ್ರವರ್ಗ-ಸಾಮಾನ್ಯ)
2) **ವಿದ್ಯಾರ್ಹತೆ:** ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಪದವಿಯಲ್ಲಿ ಶೇಕಡ 50% ಅಂಕಗಳನ್ನು ಪಡೆದು ಉತ್ತೀರ್ಣರಾಗಿರಕ್ಕದ್ದು ಮತ್ತು ಕಡ್ಡಾಯವಾಗಿ ಕನ್ನಡ ಮತ್ತು ಇಂಗ್ಲಿಷ್ ಕಂಪ್ಯೂಟರ್ ಜ್ಞಾನ ಅವಶ್ಯಕವಾಗಿರತಕ್ಕದ್ದು. ಸಹಕಾರಿ ವಿಷಯದಲ್ಲಿ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗದ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು.
3) **ಪೇ ಸ್ಕೇಲ್ :** 18600-32600 ಜೊತೆಗೆ ಭತ್ಯೆಗಳು ಅನ್ವಯಿಸುತ್ತವೆ.
4) **ವಯೋಮಿತಿ:** ಕನಿಷ್ಠ 18 ರಿಂದ 35 ವರ್ಷದೊಳಗಿರುವವರಾಗಿರತಕ್ಕದ್ದು.
5) **ಅರ್ಜಿ ಶುಲ್ಕ:** "ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ" ಇದರ ಹೆಸರಿನಲ್ಲಿ ರೂ. 1000/- ಡಿ.ಡಿ. ಯನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಅರ್ಜಿಯನ್ನು ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯತಕ್ಕದ್ದು.
6) ಸ್ವ ವಿವರವುಳ್ಳ ಸಂಪೂರ್ಣ ಮಾಹಿತಿಯನ್ನು (Bio-data) ಹಾಗೂ 2 ಭಾವಚಿತ್ರದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು, (ಅರ್ಜಿ ನಮೂನೆಯನ್ನು ಬ್ಯಾಂಕಿನ ನಾಮಫಲಕದಲ್ಲಿ ಪ್ರಕಟಿಸಲಾಗಿದೆ).
7) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 03.07.2023ರ ಸಂಜೆ 5.00 ಗಂಟೆಯಾಗಿರುತ್ತದೆ. ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದು.
8) ಅರ್ಜಿಯನ್ನು ನಿಗದಿಪಡಿಸಿದ ದಿನಾಂಕ ಮತ್ತು ಸಮಯದೊಳಗೆ ಪ್ರಧಾನ ವ್ಯವಸ್ಥಾಪಕರು ಶಿವ ಸಹಕಾರಿ ಬ್ಯಾಂಕ್ ನಿಯಮಿತ, ಆಡಳಿತ ಕಛೇರಿ ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ ಇವರಿಗೆ ಸಲ್ಲಿಸತಕ್ಕದ್ದು.
9) ಅರ್ಜಿಯೊಂದಿಗೆ ವಿದ್ಯಾರ್ಹತೆಯ ಪ್ರಮಾಣೀಕರಿಸಿದ (ದೃಢಿಕರಿಸಿದ) ಅಂಕಪಟ್ಟಿಗಳ ನಕಲನ್ನು ಲಗತ್ತಿಸತಕ್ಕದ್ದು, ಆಯ್ಕೆಯು ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗಳನ್ನೊಳಗೊಂಡಿರುತ್ತದೆ. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು. ಮೌಖಿಕ ಪರೀಕ್ಷೆಯನ್ನು 1:5ರ ಅನುಪಾತದಲ್ಲಿ ನಡೆಸಲಾಗುವುದು.
10) ಆಯ್ಕೆಯಾದ ಅಭ್ಯರ್ಥಿಗಳು 2 ವರ್ಷಗಳ ಪ್ರೊಬೇಷನರಿ ಅವಧಿ ಪೂರೈಸಬೇಕಾಗುತ್ತದೆ.
11) ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರನ್ನು ಸಂಪರ್ಕಿಸಲು ಸೂಚಿಸಿದೆ.

**ಮೊಬೈಲ್ ಸಂಖ್ಯೆ : 94498 19322**

ಸಹಿ/-
ಅಧ್ಯಕ್ಷರು/ಸಿಬ್ಬಂದಿ ನೇಮಕಾತಿ ಸಮಿತಿ
ಶಿವ ಸಹಕಾರಿ ಬ್ಯಾಂಕ್‌ನ ನಿಯಮಿತ, ದಾವಣಗೆರೆ

# ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ ನರ್ಸರಿ ವಿಭಾಗದ ವಿದ್ಯಾರ್ಥಿಗಳಿಗೆ ಅಕ್ಷರಾಭ್ಯಾಸ





ದಾವಣಗೆರೆ, ಜೂ. 10- 'ಅಕ್ಷರ' ಎಂದರೆ ನಾಶವಿಲ್ಲದ್ದು ಎಂಬಂತೆ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯ ನರ್ಸರಿ ವಿಭಾಗದ ವಿದ್ಯಾರ್ಥಿಗಳಿಗಾಗಿ ಅಕ್ಷರಾಭ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

'ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲಾ, ನಾಳೆ ಫಲ ಕೊಡುತ್ತವೆ' ಎಂಬಂತೆ ಪೂಜ್ಯ ಶ್ರೀ ಪ್ರಕಾಶ ಶಾಸ್ತ್ರಿಗಳು ನೆರವೇರಿಸಿದ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಅಕ್ಷತೆಯ ಮೇಲೆ ಅರಿಶಿನದ ಕೊಂಬಿನಿಂದ 'ಅ' ಎಂದು ಬರೆಯುವ ಮೂಲಕ ಆರಂಭಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್ ಹಾಗೂ ಶಾಲೆಯ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಮತ್ತು ವಿದ್ಯಾಸಂಸ್ಥೆಯ ಶಾಲಾ ಖಜಾಂಚಿ ಪ್ರವೀಣ್ ಹುಲ್ಲುಮನೆಯವರು, ಸಂಸ್ಥೆಯ ಪ್ರಾಂಶುಪಾಲ ಆರ್. ಸಯ್ಯದ್ ಆರಿಫ್, ಶ್ರೀಮತಿ ಪ್ರೀತಾ ಟಿ. ರೈ ಹಾಗೂ ಉಪ ಪ್ರಾಂಶುಪಾಲರಾದ ಶ್ರೀಮತಿ ಎಸ್.ಎಂ. ನೇತ್ರಾವತಿ, ಬೋಧಕ ಹಾಗೂ ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಮತ್ತು ಪೋಷಕ ವೃಂದದವರು ಉಪಸ್ಥಿತರಿದ್ದರು.

## ಚನ್ನಗಿರಿಯಲ್ಲಿ ಇಂದು ಆಕಾಶ್ ಬೈಜೂಸ್ ತರಬೇತಿ ಕೇಂದ್ರದಿಂದ ಕಾರ್ಯಾಗಾರ

ಆಕಾಶ್ ಬೈಜೂಸ್ ತರಬೇತಿ ಕೇಂದ್ರದ ವತಿಯಿಂದ ಇಂದು ಬೆಳಿಗ್ಗೆ 11 ರಿಂದ 12.30ರವರೆಗೆ ಚನ್ನಗಿರಿ ಜ್ಞಾನದೀಪ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಸಭಾಂಗಣದಲ್ಲಿ ಉಚಿತ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಸಂಪರ್ಕಿಸಿ : 92892 52001, 92890 54591.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂಡಸ್ಟ್ರಿಯಲ್ ಏರಿಯಾ, ಲೋಕಿಕೆರೆ ರಸ್ತೆ, ಸುಬ್ರಹ್ಮಣ್ಯ ನಗರ, ಎಸ್.ಎ. ರವೀಂದ್ರನಾಥ್ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು



**ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾ ಸಂಘದ ಸಂಗೀತ ಸಂಭ್ರಮ ಕಾರ್ಯಕ್ರಮದಲ್ಲಿ ಚನ್ನಗಿರಿ ಕೇದಾರ ಶಾಖಾ ಹಿರೇಮಠದ ಡಾ. ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ ಹಿತ ನುಡಿ**

ದಾವಣಗೆರೆ, ಜೂ. 10- ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಸಕಾರಾತ್ಮಕ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ದೇಶದ ಸತ್ಪ್ರಜೆಗಳಾಗಿ ಬಾಳಬೇಕೆಂದು ಚನ್ನಗಿರಿ ಕೇದಾರ ಶಾಖಾ ಹಿರೇಮಠದ ಡಾ. ಕೇದಾರಲಿಂಗ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ ಹಿತ ನುಡಿದರು.

ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾ ಸಂಘ (ದಾವಣಗೆರೆ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಕಾರಾಗೃಹದಲ್ಲಿ ಇಂದು ಏರ್ಪಡಿಸಿದ್ದ ವಿಚಾರ ಗೋಷ್ಠಿ ಮತ್ತು ಸಂಗೀತ ಸಂಭ್ರಮದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಭಾರತ ಶಾಂತಿಪ್ರಿಯ ದೇಶ. ಜೀವನ ಸುಂದರಗೊಳಿಸಲು ಮಾನವೀಯತೆಯ ಧರ್ಮದ ಸೂತ್ರಗಳನ್ನು ಅಳವಡಿಸಿಕೊಂಡರೆ ಜೀವನ ಪಾವನವಾಗುತ್ತದೆ ಎಂದರು.

ಸತ್ಯ ಶುದ್ಧ ಕಾಯಕದಲ್ಲಿ ತೊಡಗಿಸಿಕೊಳ್ಳದಿದ್ದರೆ ಮನುಷ್ಯ ಜೀವನ ನಿರರ್ಥಕ. ತಪ್ಪುಗಳನ್ನು ಮಾಡುವುದು ಸಹಜ. ಆದರೆ ಆ ತಪ್ಪುಗಳನ್ನು ತಿದ್ದಿಕೊಂಡು ಪರಿವರ್ತನೆಯತ್ತ ಹೆಜ್ಜೆ ಹಾಕಬೇಕು. ಸಕಾರಾತ್ಮಕ ಆಲೋಚನೆಗಳನ್ನು ಅಳವಡಿಸಿಕೊಳ್ಳುವಂತೆ ಬಂಧಿ ನಿವಾಸಿಗಳಿಗೆ ಕರೆ ನೀಡಿದರು.

ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಸವರಾಜ ಐರಣಿ ಅವರು 'ಬದುಕಿನ ಭವ್ಯತೆಗೆ ಕಲೆಗಳು ಜೀವನಾಡಿ' ವಿಷಯ ಕುರಿತು ಮಾತನಾಡಿ, ಕಲೆಗಳು ಬದುಕಿನ ಜೀವನಾಡಿ. ಕಲೆ ಮನುಷ್ಯನ ಜೀವನಕ್ಕೆ ಹೊಸ ಆಯಾಮ, ಚೈತನ್ಯವನ್ನು ನೀಡುತ್ತದೆ ಎಂದರು. ಸಂಗೀತ, ನಾಟಕ, ಕಲೆಗಳು ಮನಸ್ಸಿಗೆ ಮುದ ನೀಡುವುದಲ್ಲದೇ ಮಾನಸಿಕ ಒತ್ತಡ ವನ್ನು ದೂರ ಮಾಡುತ್ತವೆ. ಬದುಕಿನ ವಿಕಾಸ ದಲ್ಲಿ ರಂಗಭೂಮಿಯ ಕೊಡುಗೆ ಅತ್ಯಂತ ಪ್ರಮುಖವಾದುದು ಎಂದು ಹೇಳಿದರು.

ಸಂಗೀತ ಮನಸ್ಸನ್ನು ಅರಳಿಸುತ್ತದೆ. ನಾಟಕ, ಕಲೆಗಳ ಮೂಲಕ ತಮ್ಮ ಬದುಕನ್ನು ಆದರ್ಶಮಯ ವಾಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ್ ಕುಮಾರ್ ಮಾತನಾಡಿ, ಪ್ರತಿಯೊಬ್ಬರಲ್ಲೂ ತನ್ನದೇ ಆದ ಪ್ರತಿಭೆ ಅಡಗಿರುತ್ತದೆ. ಸೂಕ್ತ ವೇದಿಕೆ ಕಲ್ಪಿಸಿಕೊಡಬೇಕಾಗುತ್ತದೆ. ವ್ಯಕ್ತಿತ್ವ ರೂಪಿಸಿಕೊಳ್ಳುವಲ್ಲಿ ಮುಂದಾಗಬೇಕೆಂದರು.

ಸಾಹಿತ್ಯ, ಕಲೆ, ಸಂಗೀತದ ಅಭಿರುಚಿ ಬೆಳೆಸಿಕೊಳ್ಳುವ ಜೊತೆಗೆ ಉತ್ತಮ ವ್ಯಕ್ತಿಗಳಾಗಿ ಹೊರ ಹೊಮ್ಮುವಂತೆ ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರಾಗೃಹ ಅಧೀಕ್ಷಕರಾದ ಎಲ್. ಭಾಗೀರಥಿ ಮಾತನಾಡಿ, ಮನುಷ್ಯನಿಗೆ ತಾಳ್ಮೆ ಅತ್ಯಂತ ಮುಖ್ಯ. ಯಾವುದೋ ದುಡುಕಿನ, ಒತ್ತಡದ ಪರಿಸ್ಥಿತಿಗೆ ತಪ್ಪು ಮಾಡಿದ್ದು, ಅದನ್ನು ತಿದ್ದಿ ಸನ್ಮಾರ್ಗದಲ್ಲಿ ನಡೆಯಬೇಕು. ಬಂಧಿ ನಿವಾಸಿಗಳು ಕಾರಾಗೃಹದಿಂದ ಹೊರ ಹೋದ ಮೇಲೆ ಉತ್ತಮ ಪ್ರಜೆಗಳಾಗುವಂತೆ ಕರೆ ನೀಡಿದರು.

ರೈತ ಮುಖಂಡ ಅರುಣ್ ಕುಮಾರ್ ಕುರುಡಿ, ಬಂಧಿಖಾನೆ ಅಧಿಕಾರಿ ಕಾಶೀನಾಥ್, ಹವ್ಯಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟ ಚನ್ನಗಿರಿಯ ಅಧ್ಯಕ್ಷ ಬಿ.ಇ. ತಿಪ್ಪೇಸ್ವಾಮಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಕಾರ್ಯದರಶಿ ಪಂಕಜ ದಯಾನಂದ ಮಾತನಾಡಿದರು.

ಅಕ್ಕಮಹಾದೇವಿ ಮಹಿಳಾ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷೆ ಎಸ್.ಜಿ. ಶಾಂತ, ಬಂಧಿಖಾನೆ ಅಧಿಕಾರಿ ಕಾಶಿನಾಥ್ ಮಾನ್ವಿ, ಸಾಂಸ್ಕೃತಿಕ ಸಂಘ-ಸಂಸ್ಥೆಗಳ ಸಲಹೆಗಾರ ಎನ್.ಎಸ್. ರಾಜು, ವಿಠೋಬರಾವ್ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗೆ ಅಂಕ, ಸಮಯ ಎರಡೂ ಮುಖ್ಯ

## ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಾಂಸ್ಕೃತಿಕ ಸೌರಭ ಕಾರ್ಯಕ್ರಮದಲ್ಲಿ ಬಿ.ಎನ್. ಮಲ್ಲೇಶ್



ದಾವಣಗೆರೆ, ಜೂ.10- ಸ್ಪರ್ಧಾತ್ಮಕ ಯುಗದಲ್ಲಿ ಪರೀಕ್ಷೆಯ ಒಂದು ಅಂಕ, ಸಮಯದ ಒಂದು ಸೆಕೆಂಡು ಎರಡೂ ಅತಿ ಮುಖ್ಯ. ಇವುಗಳ ಕಡೆಗೆ ವಿದ್ಯಾರ್ಥಿಗಳು ಹೆಚ್ಚು ಗಮನ ಹರಿಸಬೇಕು ಎಂದು ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್ ಕಿವಿ ಮಾತು ಹೇಳಿದರು.

ಶನಿವಾರ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಸೌರಭ-2023 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಲೇಜು ದಿನಗಳಲ್ಲಿ ಇರುವ ಜೀವನೋತ್ಸಾಹ ಒಳ್ಳೆಯ ರೀತಿಯಲ್ಲಿ ಬಳಕೆಯಾಗಬೇಕು. ಬಿಕಾಂ ನಂತರ ಮುಂದೇನು ಎನ್ನುವ ಕುರಿತು ಚಿಂತನೆ ಮಾಡಬೇಕು. ರಾಜ್ಯದಲ್ಲಿ ಪ್ರತಿವರ್ಷ 2 ಲಕ್ಷ ವಿದ್ಯಾರ್ಥಿಗಳು ಬಿಕಾಂ ಪದವಿ ಪಡೆದು ಹೊರಬರುತ್ತಾರೆ. ಹೀಗೆ ಹೊರಬರುವ ವಿದ್ಯಾರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳಿವೆ. ಇಂದು ಲಭ್ಯ ಇರುವ ಹೊಸ ತಾಂತ್ರಿಕತೆ, ನೈಪುಣ್ಯತೆಗಳನ್ನು ಬಳಕೆ ಮಾಡಿಕೊಂಡು ಜೀವನದಲ್ಲಿ ಮುಂದೆ ಬರಬೇಕೆಂದು ಕರೆ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ತೋರಿಸುವುದಲ್ಲ. ಎಲ್ಲರ ಒಳಗೊಳ್ಳುವಿಕೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಹೆಚ್ಚು ಮನರಂಜನಾತ್ಮಕವಾಗಿರುತ್ತವೆ. ಈ ನಿಟ್ಟಿನಲ್ಲಿ ಎಲ್ಲ ವಿದ್ಯಾರ್ಥಿಗಳು ವೇದಿಕೆಯನ್ನು ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಇವೆಂಟ್ ಮೇನೇಜ್‌ಮೆಂಟ್ ಕೂಡ ಇಂದು ಉದ್ಯಮವಾಗಿ ಬೆಳೆದಿದೆ. ಮದುವೆ, ಆರತಕ್ಷತೆ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡುವುದು ಕೂಡ ಪ್ರಮುಖ ದುಡಿಮೆಯ ಭಾಗವಾಗುತ್ತಿದೆ. ಬಿಕಾಂ, ಎಂಬಿಎ ಪದವೀಧರರು ಈ ಅಂಶಗಳತ್ತ ಗಮನ ಹರಿಸುವಂತೆ ತಿಳಿಸಿದರು.

ಕಾಲೇಜಿನ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಬಿ.ಸಿ.ತಹಶೀಲ್ದಾರ್ ಮಾತನಾಡಿ, ನಾಡಿನ ಸಂಸ್ಕೃತಿ, ಪರಂಪರೆಯ ರಾಯಭಾರಿಗಳಾಗಿ ವಿದ್ಯಾರ್ಥಿಗಳು ಕೆಲಸ ಮಾಡಬೇಕು. ಮುಂದಿನ ಪೀಳಿಗೆಗೆ ಈ ನೆಲದ ಆಚಾರ, ವಿಚಾರಗಳನ್ನು ತಿಳಿಸಿಕೊಡಬೇಕೆಂದು ಕಿವಿ ಮಾತು ಹೇಳಿದರು.

ಅಧ್ಯಾಪಕ ವೆಂಕಟೇಶ್ ಬಾಬು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಆರ್. ಅಂಜನಪ್ಪ ವಹಿಸಿದ್ದರು. ಐಕ್ಯೂಎಸಿ ಸಂಚಾಲಕ ಡಾ.ಕೆ.ನಾರಾಯಣ ಸ್ವಾಮಿ, ಪತ್ರಾಂಕಿತ ವ್ಯವಸ್ಥಾಪಕಿ ಶ್ರೀಮತಿ ಗೀತಾದೇವಿ, ಪ್ರೊ.ದಾದಾಪೀರ್ ನವಿಲೇಹಾಲ್, ಪ್ರೊ.ಮರುಳುಸಿದ್ದಪ್ಪ, ಸೇರಿದಂತೆ ಇತರರು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ದೀಪಾ ಪ್ರಾರ್ಥಿಸಿದರು.

## ಚನ್ನಗಿರಿ : ಆಂಜನೇಯ ಸ್ವಾಮಿಗೆ ಹರಕೆ ತೀರಿಸಿದ ಕಾಂಗ್ರೆಸ್ ಮುಖಂಡರು



ಚನ್ನಗಿರಿ, ಜೂ 10- ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಅವರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಚನ್ನಗಿರಿ ತಾಲ್ಲೂಕಿನ ಮಲ್ಲಿಗೆನಹಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಶ್ರೀ ಆಂಜನೇಯ ಸ್ವಾಮಿಗೆ 101 ತೆಂಗಿನಕಾಯಿ ಒಡೆದು ಹರಕೆ ತೀರಿಸಿದ್ದಾರೆ.

ಮಲ್ಲಿಗೆನಹಳ್ಳಿ ಗ್ರಾಮದ ತಾಲ್ಲೂಕು ಪಂಚಾಯಿತಿ ಪರಾಜಿತ ಅಭ್ಯರ್ಥಿ ಟಿ.ಆರ್.ರಮೇಶ್, ಶಾಸಕ ಕೆ.ಎಸ್.ಬಸವಂತಪ್ಪ ಗೆಲುವು ಸಾಧಿಸಿದರೆ, 101 ತೆಂಗಿನಕಾಯಿ ಒಡೆಯುವುದಾಗಿ ಹರಕೆ ಹೊತ್ತಿದ್ದರು. ಅವರು ದೇವರಲ್ಲಿ ಪ್ರಾರ್ಥಿಸಿದಂತೆ ಕೆ.ಎಸ್.ಬಸವಂತಪ್ಪ ಗೆಲುವು ಸಾಧಿಸಿದ್ದಾರೆ. ಹೀಗಾಗಿ ಟಿ.ಆರ್. ರಮೇಶ್ ಮತ್ತು ಗ್ರಾಮದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವರಿಗೆ 101 ತೆಂಗಿನಕಾಯಿ ಒಡೆದು ಹರಕೆ ತೀರಿಸಿದ್ದಾರೆ. ಈ ಸಂದರ್ಭದಲ್ಲಿ ಟಿ.ಆರ್.ರಮೇಶ್, ಹನುಮಂತಪ್ಪ, ತಿಪ್ಪೇಶಿ, ಹಾಲೇಶ್, ಸುರೇಶ್, ಬಸವರಾಜ್, ಲೋಕೇಶ್, ಹನುಮಂತ, ರುದ್ರೇಶ್ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

## ನಗರದಲ್ಲಿ ಇಂದು 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ನಾಟಕ

ದಾವಣಗೆರೆ, ಜೂ. 10- ಶ್ರೀಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕಾರ್ಮಿಕ ಸಂಘ (ಎಐಟಿಯುಸಿ ಸಂಯೋಜಿತ) ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 11 ರ ಭಾನುವಾರ ಸಂಜೆ 6 ಗಂಟೆಗೆ ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಸಂಘದ 9 ನೇ ವಾರ್ಷಿಕೋತ್ಸವದ ಅಂಗವಾಗಿ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ನಾಟಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಸಂಸ್ಥಾಪಕ ಅಧ್ಯಕ್ಷ ನೀಲಗುಂದ ಬಸವನಗೌಡ್ರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನೀಲಗುಂದ ಗುಡ್ಡದ ಸಂಸ್ಥಾನ ಜಂಗಮ ಪೀಠದ ಶ್ರೀ ಚನ್ನಬಸವ ಶಿವಯೋಗಿಗಳು ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ನಾಟಕೋತ್ಸವ ಉದ್ಘಾಟಿಸಲಿದ್ದಾರೆ ಎಂದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಡಿ.ಜಿ. ಶಾಂತನಗೌಡ್ರು, ಬಸವರಾಜ ಶಿವಗಂಗಾ, ಬಿ.ಪಿ. ಹರೀಶ್, ಲತಾ ಮಲ್ಲಿಕಾರ್ಜುನ್, ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವವರ ಸಂಘದ ಜಿಲ್ಲಾಧ್ಯಕ್ಷ ವಿ. ಲಕ್ಷ್ಮಣ, ರಾಜ್ಯ ಕಾರ್ಯಾಧ್ಯಕ್ಷ ಹೆಚ್. ಜಿ. ಉಮೇಶ್ ಆವರಗೆರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಬಾಗಲಕೋಟೆ ಜಿ.ಪಂ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಶೀಲ ಕುಮಾರ್ ಭೀಮಪ್ಪ ಬೆಳಗಲಿ, ಬ್ಯಾಡಗಿ ಯುವ ಮುಖಂಡ ಎಂ.ಎಸ್. ಪಾಟೀಲ್, ಕೆಬಿಆರ್ ಡ್ರಾಮಾ ಕಂಪನಿ ಮಾಲೀಕ ಸಿ. ಎಲ್. ಚಿಂದೋಡಿ ಚಂದ್ರಧರ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವವರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಜಿ.ಉಮೇಶ್ ಆವರಗೆರೆ, ಕಲಾವಿದರ ಸಂಘದ ಸಂಚಾಲಕ ಪಿ.ಕೆ.ಖಾದರ್, ಡಿ.ಜಿ. ನಾಗರಾಜ್, ಶಿವಕುಮಾರ್ ಡಿ. ಶೆಟ್ಟರ್ ಉಪಸ್ಥಿತರಿದ್ದರು.

# ಬೀದಿ ಬದಿ ವ್ಯಾಪಾರಸ್ಥರ ಅನುಕೂಲತೆಗೆ ಕ್ಷೇಮಾಭಿವೃದ್ಧಿ ಸಂಘ ಸ್ಥಾಪನೆ

ದಾವಣಗೆರೆ, ಜು. 10- ಬೀದಿ ಬದಿ ವ್ಯಾಪಾರಸ್ಥರ ಹಿತದೃಷ್ಟಿಯಿಂದಾಗಿ ದಾವಣಗೆರೆ ಬೀದಿ ಬದಿ ಸ್ಥಿರ ಹಾಗೂ ಸಂಚಾರಿ ಚಿಲ್ಲರೆ ವ್ಯಾಪಾರಸ್ಥರ ಕ್ಷೇಮಾಭಿವೃದ್ಧಿ ಸಂಘ ರಚಿಸಲಾಗುತ್ತಿದೆ ಎಂದು ಸಂಘದ ನೂತನ ಜಿಲ್ಲಾಧ್ಯಕ್ಷ ಇಸ್ಮಾಯಿಲ್ ತಿಳಿಸಿದ್ದಾರೆ.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 30-40 ವರ್ಷಗಳಿಂದ ಸೊಪ್ಪು, ತರಕಾರಿ, ಹಣ್ಣು-ಹೂ, ಬಟ್ಟೆ, ಗೃಹೋಪಯೋಗಿ ವಸ್ತುಗಳು, ತಿಂಡಿ-ಊಟ ಇತರೆ ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳನ್ನು ಒಂದೆಡೆ ಸೇರಿ ಅವರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗೆ ಈ ಸಂಘದ ಮೂಲಕ ಶ್ರಮಿಸಲಾಗುವುದು ಎಂದರು.

ಜಕಾತಿ ವಸೂಲಿಯಿಂದ ಬಡ ವ್ಯಾಪಾರಿಗಳು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಜಕಾತಿ ಜೊತೆಗೆ ತ್ಯಾಜ್ಯ ಸಂಗ್ರಹ ಮಾಡುವವರಿಗೂ ಹಣ ಕೊಡಬೇಕಾಗಿದ್ದು, ಇದು ವ್ಯಾಪಾರಿಗಳಿಗೆ ಹೊರೆಯಾಗುತ್ತಿದೆ. ಪ್ರಸ್ತುತ ಮಹಾನಗರ ಪಾಲಿಕೆಯಿಂದ ರಶೀದಿ ನೀಡಿ ಜಕಾತಿ ವಸೂಲಿ ಮಾಡಲಾಗುತ್ತಿದ್ದು, ಇದೇ ಕ್ರಮ ಮುಂದುವರಿಸಿಕೊಂಡು ಹೋಗಬೇಕು. ಜಕಾತಿ ವಸೂಲಿಗೆ ಬೇರೆಯವರಿಗೆ ಗುತ್ತಿಗೆ ನೀಡಬಾರದು ಎಂದು ಒತ್ತಾಯಿಸಿದರು.

ಮಹಾನಗರ ಪಾಲಿಕೆಯಲ್ಲಿ ಸುಮಾರು 3 ಸಾವಿರ ವ್ಯಾಪಾರಿಗಳು ಮಾತ್ರ ಹೆಸರು ನೋಂದಾಯಿಸಿಕೊಂಡಿದದ್ದರು. ಇತ್ತೀಚೆಗೆ ಪ್ರಧಾನ ಮಂತ್ರಿ ಸ್ವ ನಿಧಿ ಯೋಜನೆ ಜಾರಿಯಾದ ಮೇಲೆ ನೋಂದಾಯಿಸಿಕೊಂಡವರ ಹೆಸರು 10400ಕ್ಕೆ ಏರಿಕೆಯಾಗಿದೆ. ಇದರಲ್ಲಿ ವ್ಯಾಪಾರಿಗಳಲ್ಲದವರೂ ಇದ್ದಾರೆ ಎಂದರು.

ಮಹಿಳಾ ಅಧ್ಯಕ್ಷೆ ಶ್ರೀಮತಿ ಭಾರತಿ ಮಾತನಾಡಿ, ಸಂಘಕ್ಕೆ ಸದಸ್ಯರಾಗುವವರು ಮೊಬೈಲ್ ಸಂಖ್ಯೆ 9900402788, 9743767844, 9591300693ಗೆ ಸಂಪರ್ಕಿಸಬಹುದು. ಮುಂದಿನ ದಿನಗಳಲ್ಲಿ ನಗರದಲ್ಲಿ ಬೃಹತ್ ಸಮಾವೇಶ ನಡೆಸಿ, ಸಂಘದ ರೂಪುರೇಷೆ ಮಾಡಲಾಗುವುದು ಎಂದು ಹೇಳಿದರು.

ಹೆಚ್.ಸಿ. ಮಲ್ಲಪ್ಪ, ಎಸ್.ದುಗ್ಗಪ್ಪ, ಕೃಷ್ಣಮೂರ್ತಿ, ತಿಪ್ಪೇಸ್ವಾಮಿ, ಹೊನ್ನಮ್ಮ, ನಾಗಭೂಷಣ್ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ನಗರದ ಕಲಾವಿದ ಶಿವಶಂಕರ್ ಸುತಾರ್ ಅವರಿಗೆ ಇಂದು ಪ್ರಶಸ್ತಿ ಪ್ರದಾನ



ಬೆಂಗಳೂರಿನ 'ಆರ್ಟ್ ಬೇರು' ಕಲಾ ಸಂಘಟನೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಕಲಾ ಪ್ರದರ್ಶನ ಮತ್ತು ಸ್ಪರ್ಧೆಯಲ್ಲಿ ದಾವಣಗೆರೆಯ ದೃಶ್ಯ ಕಲಾವಿದ ಶಿವಶಂಕರ್ ಸುತಾರ್ ಅವರ ಮಿಶ್ರ ಮಾಧ್ಯಮದ 'ಡಿವೈನ್ ಕ್ರಿಯೇಷನ್' ಶೀರ್ಷಿಕೆಯ ಕಲಾಕೃತಿಯು ಸ್ಪೆಷಲ್ ಜ್ಯೂರಿ ಪ್ರಶಸ್ತಿಗೆ ಆಯ್ಕೆ ಆಗಿದೆ. ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಇಂದು ನಡೆಯಲಿರುವ ಈ ಕಲಾಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದೆಂದು ಆರ್ಟ್ ಬೇರು ಸಂಘಟನೆ ಪ್ರಕಟಣೆಯಲ್ಲಿ ತಿಳಿಸಿದೆ. ಶಿವಶಂಕರ್ ಸುತಾರ ಅವರು ದಾವಣಗೆರೆಯ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಬೋಧನಾ ಸಹಾಯಕರಾಗಿದ್ದಾರೆ.

# ಶೌಚಾಲಯ, ಮುರಿದ ಚೇರುಗಳು, ಕುಡಿಯಲು ನೀರಿಲ್ಲದ ಮಹಾನಗರ ಪಾಲಿಕೆ




**ಮಾನ್ಯರೇ,**

ನೋಡು ನೋಡುತ್ತಿದಂತೆ ದಾವಣಗೆರೆ ನಗರವು ಬೃಹತ್ತಾಗಿ ಬೆಳೆಯುತ್ತಿದ್ದು, ಅನೇಕ ಸಾರ್ವಜನಿಕರು ದಿನನಿತ್ಯ ನಗರಕ್ಕೆ ತಮ್ಮ ಅನೇಕ ಕೆಲಸಗಳ ನಿಮಿತ್ತ ಬರುತ್ತಲೇ ಇರುತ್ತಾರೆ. ಹಲವಾರು ಜನರು ಸಾರ್ವಜನಿಕ ಸ್ಥಳಗಳಿಗೆ ಅಥವಾ ವ್ಯವಹರಿಸುವ ಅಂಗಡಿಗಳಿಗೆ ಹೋದಾಗ ಬಾಯಾರಿಸಿ ಬಂದವರಿಗೆ ಒಂದು ಲೋಟ ನೀರು ಕೇಳಿದರೆ ಸುಲಭವಾಗಿ ಸಿಗುತ್ತದೆ. ಆದರೆ ನಮ್ಮ ದುರಾದೃಷ್ಟ ಏನೆಂದರೆ, ಇಡೀ ನಗರಕ್ಕೆ ವ್ಯವಸ್ಥಿತವಾಗಿ ನೀರು ಸರಬರಾಜು ಮಾಡುವ ಮಹಾನಗರ ಪಾಲಿಕೆಯಲ್ಲಿ ಕುಡಿಯಲು ಹನಿ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಇರುವುದಂತು ಅಷ್ಟೇ ಸತ್ಯ.

ಹೌದು ಸ್ನೇಹಿತರೆ, ಈ ವರ್ಷದ ಇಡೀ ಬೇಸಿಗೆಯಲ್ಲಿ ಕುಡಿಯಲು ಹನಿ ನೀರಿಲ್ಲದೆ ಅನೇಕ ಸಾರ್ವಜನಿಕರು ಪರದಾಡಿದ್ದಾರೆ. ಇದರ ಬಗ್ಗೆ ಕೆಲ ಪಾಲಿಕೆ ಸಿಬ್ಬಂದಿಗೆ ಕೇಳಿದಾಗ 'ಅಯ್ಯೋ ಸಾರ್ ಹೋದ ವರ್ಷ ಒಂದು ಕೆಂಟ್ ಹಾಕಿದರು ಅದು ಎರಡೇ ದಿನಕ್ಕೆ ಹೋಯ್ತು' ಎಂದು ಅಳಲು ತೋಡಿಕೊಂಡಿದ್ದಾರೆ. ಇದರ ಜೊತೆ ಪಾಲಿಕೆಯೊಳಗಡೆ ಸಾರ್ವಜನಿಕರಿಗಾಗಿ ಹಾಕಿರುವ ಅನೇಕ ಚೇರ್‌ಗಳು ಕಿತ್ತು ನೆಲಕಚ್ಚಿ ವರ್ಷವೇ ಕಳೆದರೂ ಕಣ್ಣು ಮುಚ್ಚಿ ಕೂತಿರುವ ದಾವಣಗೆರೆ ಮಹಾನಗರಪಾಲಿಕೆ ನಿದ್ದೆಯಿಂದ ಎದ್ದು ಇತ್ತ ಗಮನಹರಿಸಬೇಕಿದೆ.

ಸಾರ್ವಜನಿಕರು ಮುಖ್ಯ ವಾಗಿ ಹಿರಿಯ ನಾಗರಿಕರು, ಮಹಿಳೆಯರು ಕಂದಾಯ ರಶೀದಿ ಪಡೆಯಲು ಮತ್ತು ಅನೇಕ ಕೆಲಸಗಳ ನಿಮಿತ್ತ ಪಾಲಿಕೆಗೆ ಬಂದರೆ ಕೂರಲು ಸರಿಯಾದ ಚೇರ್‌ಗಳಿಲ್ಲದೇ ಪರದಾಡಬೇಕಿದೆ.

ಈ ದುರ್ವ್ಯವಸ್ಥೆಗೆ ಸಾರ್ವಜನಿಕರು ಬೈಯ್ಯುವುದು ಸರ್ವೆ ಸಾಮಾನ್ಯವಾಗಿದೆ. ಪಾಲಿಕೆಯ ಹಿಂಭಾಗದಲ್ಲಿ ಸಾರ್ವಜನಿಕ ಶೌಚಾಲಯ ಇದ್ದರು ಅದಕ್ಕೆ ಬೀಗ ಹಾಕಿ 3 ವರ್ಷ ಮೇಲ್ಪಟ್ಟು ಕಳೆದಿರುವುದು ನಿಜಕ್ಕೂ ಬಹಳ ಬೇಸರದ ಸಂಗತಿ. ಕುಡಿಯಲು ಹನಿ ನೀರಿಲ್ಲದಿರುವ ಮಹಾನಗರಪಾಲಿಕೆಯಲ್ಲಿ ಶೌಚಾಲಯ ಬಯಸುವುದು ದೂರದ ಮಾತು ಎಂದು ಅನೇಕ ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನೂರಾರು ಕೋಟಿ ಅನುದಾನದಿಂದ ನಗರಾದ್ಯಂತ ಕಾಮಗಾರಿ ಮಾಡುತ್ತಿರುವ ನಗರಪಾಲಿಕೆ ಹನಿ ನೀರು, ಚೇರು, ಸಾರ್ವಜನಿಕ ಶೌಚಾಲಯವಿಲ್ಲದೆ ಇರು ವಷ್ಟು ಬರಗೆಟ್ಟಿದೆಯೇ? ಪೂಜ್ಯ ಮಹಾ ಪೌರರು ಮತ್ತು ಮಾನ್ಯ ಆಯುಕ್ತರು ಕೂಡಲೇ ಇದರ ಬಗ್ಗೆ ಗಮಹರಿಸುತ್ತಾರೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಿದೆ.

**- ನಾಗಾರ್ಜುನ್ ಗುಜ್ಜರ್**
**ರಾಜೇಂದ್ರ,** ತರಳಬಾಳು ಬಡಾವಣೆ,
ದಾವಣಗೆರೆ. 9739555455

## ನಗರದಲ್ಲಿ ಇಂದು ಯೋಗ ತರಬೇತಿ ಶಿಬಿರ ಉದ್ಘಾಟನೆ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಿದ್ದವೀರಪ್ಪ ಬಡಾವಣೆ ಶಾಖೆಯ ಆಶ್ರಯದಲ್ಲಿ ಉಚಿತ ಯೋಗ ತರಬೇತಿ ಶಿಬಿರ ಉದ್ಘಾಟನೆ ಆಗಲಿದೆ ಎಂದು ಕಲಾಕುಂಚ ಸಿದ್ದವೀರಪ್ಪ ಬಡಾವಣೆ ಶಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಉಮಾ ನಾಗರಾಜ್ ತಿಳಿಸಿದ್ದಾರೆ.

ಸಿದ್ಧವೀರಪ್ಪ ಬಡಾವಣೆಯ ಶ್ರೀ ಗಣೇಶ ನಿಲಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪತಂಜಲಿ ಯೋಗ ಉಪಾಧ್ಯಕ್ಷ ಎಸ್.ಹೆಚ್. ಕಲ್ಲೇಶ್ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ವೇದಾವತಿ ವಲಯ ದಾವಣಗೆರೆ ಸಂಚಾಲಕ ಟಿ.ವಿ. ವಿ.ಸತೀಶ್ ಆಗಮಿಸಲಿದ್ದಾರೆ. ಕಲಾಕುಂಚ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಅಧ್ಯಕ್ಷ ಕೆ.ಹೆಚ್. ಮಂಜುನಾಥ್, ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ಉಪಸ್ಥಿತರಿರುತ್ತಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಈ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಲಲಿತಾ ಕಲ್ಲೇಶ್ ವಹಿಸಿಕೊಳ್ಳಲಿದ್ದಾರೆ.

ಯೋಗ ಪಟುಗಳಾದ ಶ್ರೀಮತಿ ಲೀಲಾ ಸುಭಾಷ್, ಶ್ರೀಮತಿ ಸಂಧ್ಯಾ ಶ್ರೀನಿವಾಸ್ ನಿರಂತರ 10 ದಿನಗಳ ಕಾಲ ಯೋಗ ತರಬೇತಿ ನೀಡಲಿದ್ದಾರೆ. ಆಸಕ್ತರು 8317427179, 9740549009, 9481160476, 9008571113 ಈ ಸನಿಹ ವಾಣಿಗಳಿಗೆ ಸಂಪರ್ಕಿಸಬಹುದು.

## ರಾಣೇಬೆನ್ನೂರಿನಲ್ಲಿ ಇಂದು 'ಶಕ್ತಿ'

ರಾಣೇಬೆನ್ನೂರು : ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಶಕ್ತಿ ಕಾರ್ಯಕ್ರಮಕ್ಕೆ ಇಂದು ಮಧ್ಯಾಹ್ನ 12.30ಕ್ಕೆ ನಗರದ ಬಸ್ ನಿಲ್ದಾಣದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಚಾಲನೆ ನೀಡಲಿದ್ದಾರೆ. ಬಸ್‌ನಲ್ಲಿ ಪ್ರೊಜೆಕ್ಟರ್ ಹಾಕುವ ಮೂಲಕ ಯೋಜನೆಗೆ ಚಾಲನೆ ನೀಡಲಾಗುವುದು. ಈ ಕಾರ್ಯಕ್ರಮದ ಲಿಂಕನ್ನು ಕ್ಷೇತ್ರ ವ್ಯಾಪ್ತಿಯ ಎಲ್ಲರಿಗೂ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ.


**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜೆ.ಪಿ., ಇಂಜಿನಿಯರ್
+91 70190 70400

#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.

Arka Educational & Cultural Trust (Regd.)
**JAIN COLLEGE OF COMPUTER APPLICATION & MANAGEMENT, DAVANAGERE**
(A Unit of Jain Group of Institutions, Bengaluru)
(Affiliated to Davanagere University, Davanagere)
Email: jainccam2023@gmail.com Web: www.jccam.in Mob: 97404 31466

**Invites Application for**

| Sl. No. | Name of the Post | Qualification | No. of Post |
|---|---|---|---|
| 1. | Principal | First class in Master Degree with minimum experience of 10 years, Preferred for **PhD, NET** and **SLET** candidates | 01 |
| 2. | Teaching Faculty | Eligibility - First class in Master degree **M Sc** - in Computer Science, **M Tech** - in Computer Science, **MCA.** 2-3 years Experience candidates and for **NET, SLET** candidates | BSc Computer Science – 02<br>BCA - 03 |
| 3. | Librarian | **M Lib** with Experience of 2-3 years | 01 |
| 4. | Office Staff | Any Degree with Experience of 2-3 years | 01 |

Candidates may send their Resume through by e-mail id / by hand or post within 10 days to the following e-mail id : jainccam2023@gmail.com or our below address -
# 323, Bada Cross, Near Veereshwara Punyashrama, Avaragere, Davanagere - 577 003

# ಕೊರೊನಾ ನಂತರ ಪರಿಸರ ಕಾಳಜಿ ಹೆಚ್ಚಿದೆ



ದಾವಣಗೆರೆ, ಜೂ. 10- ಕೊರೊನಾ ಬಂದು ಹೋದ ನಂತರ ಪರಿಸರದ ಬಗ್ಗೆ ಜನರಲ್ಲಿ ಒಂದಷ್ಟು ಕಾಳಜಿ ಹೆಚ್ಚೇ ಇದೆ ಎಂದರೆ ತಪ್ಪಾಗಲಾರದು ಎಂದು ಜಾನಪದ ಕಲಾ ತಂಡಗಳ ಮಾರ್ಗದರ್ಶಕ ಮಂಜುನಾಥ್ ಮಾಗಾನಹಳ್ಳಿ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಎಲಿಸವ್ವ ಜಾನಪದ ಕಲಾ ತಂಡದ ಕಲಾವಿದರಿಂದ ಶ್ಯಾಮನೂರು ಪಾರ್ಕ್‌ನಲ್ಲಿ ವಿಶ್ವ ಪರಿಸರ ದಿನಾಚರಣೆಯಲ್ಲಿ ಉಪಸ್ಥಿತರಿದ್ದು ಅವರು ಮಾತನಾಡಿದರು.

ಆಧುನೀಕರಣಗೊಳ್ಳುತ್ತಿರುವ ಜಗತ್ತಿನಲ್ಲಿ ಪರಿಸರಕ್ಕೆ ಪರೋಕ್ಷವಾಗಿ ಹಾನಿಯಾಗುತ್ತಿದೆ. ಗಾಳಿ, ನೀರು, ಮಣ್ಣು ಪ್ರತಿಯೊಂದು ಜೀವ ರಾಶಿಗೂ ಬೇಕು. ಅದನ್ನು ಕಲುಷಿತವಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂಬ ಧ್ಯೇಯದೊಂದಿಗೆ, ಜೊತೆ ಜೊತೆಗೆ ಈ ವಿಶ್ವ ಪರಿಸರ ದಿನಾಚರಣೆ ಆಚರಣೆಗೆ ಮಾತ್ರ ಸೀಮಿತವಾಗದೆ, ಮುಂದಿನ ಪೀಳಿಗೆಗೆ ಜೀವ ತುಂಬುವಂತಾಗಬೇಕು. ಅದಕ್ಕಾಗಿಯಾದರೂ ಹಸಿರು ಬೆಳೆಸಿ ಉಸಿರು ಪಡೆಯೋಣ ಎಂದರು.

ಕಳೆದ ವರ್ಷವೂ ಇದೇ ಪಾರ್ಕ್‌ನಲ್ಲಿ ಗಿಡ ನೆಟ್ಟು ಪರಿಸರ ದಿನಾಚರಣೆ ಆಚರಿಸಿದ್ದೆವು. ಅವಕ್ಕೆ ನೀರೆರೆದು ಪೋಷಿಸಿ ಅರ್ಥಬದ್ಧ ಆಚರಣೆ ನಡೆಸಿದ್ದೆವು. ಇಂದು ಕೂಡ ಅದೇ ಪಾರ್ಕ್‌ನಲ್ಲಿ ಪರಿಸರ ದಿನಾಚರಣೆಗೆ ಎರಡು ಗಿಡಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು.

ತಂಡದ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ವೆಂಕಟೇಶ್, ತಿಪ್ಪೇಶ್ ಲಕ್ಕಿಕೋನಿ, ಶೋಭಾ ಮಂಜುನಾಥ್, ಗೀತಾಂಜಲಿ, ಶ್ರೀಮತಿ ಶೈಲಾ, ಅಮೀರಾ, ಸಹನಾ, ಸುಮತಿ , ಮಂಗಳ ಮಲ್ಲಿಕಾರ್ಜುನ್, ಮಮತಾ, ಹಾಗೂ ಮತ್ತಿತರರು, ಕಲಾವಿದರು ಉಪಸ್ಥಿತರಿದ್ದರು. ಶ್ರೀಮತಿ ಶೋಭಾ ಮಂಜುನಾಥ್ ಸ್ವಾಗತಿಸಿದರು. ಜ್ಯೋತಿ ದೀಪಕ್ ವಂದಿಸಿದರು.

# ಗುಡಿಮುಂದೆ ನಿಲ್ಲುವುದನ್ನು ಬಿಟ್ಟು ಗ್ರಂಥಾಲಯದ ಮುಂದೆ ನಿಂತಲ್ಲಿ ದೇಶ ಉದ್ಧಾರವಾದೀತು...

## ಹರಪನಹಳ್ಳಿ ಕಸಾಪ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟನಾ ಸಮಾರಂಭದಲ್ಲಿ ಡಿ.ರಾಮನವಲಿ



ಹರಪನಹಳ್ಳಿ, ಜೂ.10- ಕನ್ನಡ ನೆಲ, ಜಲ ಸಂರಕ್ಷಣೆ ಮಾಡುವ ಧ್ಯೇಯವನ್ನು ಕನ್ನಡ ಸಾಹಿತ್ಯ ಪರಿಷತ್ ಹೊಂದಿದ್ದು, ಈಗ ಪರಿಷತ್‌ನಲ್ಲಿ ಸಾಕಷ್ಟು ಬದಲಾವಣೆಯಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಿ.ರಾಮನಮಲಿ ಹೇಳಿದರು.

ತಾಲ್ಲೂಕಿನ ಅನಂತನಹಳ್ಳಿ ಬಳಿ ಇರುವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ದಿ. ಶ್ರೀ ಹೆಚ್. ಬಸಪ್ಪ ದತ್ತಿ, ಬೆಣ್ಣೆಹಳ್ಳಿ ಚಪ್ಪರದಹಳ್ಳಿ ಶ್ರೀಮತಿ ಬಸಮ್ಮ ಕೆಂಚಪ್ಪ ದತ್ತಿ, ಶ್ರೀ ಹೊಸಮನಿ ಬಾಗಳಿ ಚಿದಾನಂದ ಧರ್ಮಪತ್ನಿ ಶಿವಗಂಗಮ್ಮ ದತ್ತಿ, ಶಿವಮೊಗ್ಗದ ನಾಗರಾಜಪ್ಪ ದತ್ತಿ, ಮೇಘರಾಜ ಜೈನ್ ದತ್ತಿ, ದಿ. ಡಾ. ಎನ್.ರಾಮಪ್ಪ ದತ್ತಿ ಉದ್ಘಾಟಿಸಿ ಅವರು ಮಾತನಾಡಿದರು.

ಮನೆ ಅಂಗಳ, ಮನೆ ಮೇಲೆ, ಜನರಿದ್ದ ಕಡೆ ಸಾಹಿತ್ಯ ಬೆಳೆಸುವ ಕೆಲಸ ಸಾಹಿತ್ಯ ಪರಿಷತ್ ಮಾಡುತ್ತಿದೆ. ಹೆಣ್ಣು ಮಕ್ಕಳು ಗುಡಿ ಗುಂಡಾರದ ಮುಂದೆ ನಿಲ್ಲುವುದನ್ನು ಬಿಟ್ಟು, ಗ್ರಂಥಾಲಯದ ಮುಂದೆ ನಿಂತಲ್ಲಿ ದೇಶ ಉದ್ದಾರವಾಗುವುದರಲ್ಲಿ ಅನುಮಾನವಿಲ್ಲ ಎಂದರು.

### ಚಿತ್ರದುರ್ಗದ ಇತಿಹಾಸದಂತೆ ಹರಪನಹಳ್ಳಿ ಪಾಳೇಗಾರರ ಇತಿಹಾಸ ಸಿಗದೇ ಇರುವುದು ದೊಡ್ಡ ದುರಂತ : ಸಾಹಿತಿ ಇಸ್ಮಾಯಿಲ್ ಎಲಿಗಾರ್

ಸಾಹಿತಿ ಇಸ್ಮಾಯಿಲ್ ಎಲಿಗಾರ್ ಅವರು, ಹಡಪದ ಅಪ್ಪಣ್ಣ ಮತ್ತು ಲಿಂಗಮ್ಮನವರ ವಚನ ಸಾಹಿತ್ಯ, ಬಾಗಳಿ ಕಲ್ಲೇಶ್ವರ ದೇವಸ್ಥಾನ ಹಾಗೂ ಹರಪನಹಳ್ಳಿ ಪಾಳೇಗಾರರು, ಹಾಸ್ಯ ಸಾಹಿತ್ಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿ, ಹಣ, ಆಸ್ತಿ ಸಂಪತ್ತಿಗಿಂತ ನಗು, ಮಾನಸಿಕ ಸಂಪತ್ತು, ವಿನೋದವಿರುವಲ್ಲಿ ವಿರಸ ಇರುವುದಿಲ್ಲ. ನಗುವುದು ನಗಿಸುವುದು ಹೊಟ್ಟೆ ತುಂಬಾ ಸಿಹಿ ಉಂಡಂತೆ. ರಾಜ್ಯದ ಅನೇಕ ಕಡೆ ರಾಜ ಮನೆತನಗಳು ಆಳ್ವಿಕೆ ಮಾಡಿದಂತೆ ದಾದಣ್ಣ ನಾಯಕನಿಂದ ಆರಂಭವಾಗಿ ರಾಜ ಸೋಮಶೇಖರನಾಯಕ ಸೇರಿದಂತೆ 16 ಜನ ಪಾಳೇಗಾರರು ಹರಪನಹಳ್ಳಿಯನ್ನು ಆಳ್ವಿಕೆ ಮಾಡಿ ಉಚ್ಚಂಗಿ ದುರ್ಗವನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡ ಇತಿಹಾಸವಿದೆ. ಆದರೆ ಇತಿಹಾಸ ತಿರುಚುವ ಪ್ರಯತ್ನ ಮಾಡಿದ ಮನುವಾದಿಗಳು ಚಿತ್ರದುರ್ಗದ ಇತಿಹಾಸ ಸಿಗುತ್ತಿದ್ದು, ಹರಪನಹಳ್ಳಿ ಪಾಳೇಗಾರರ ಇತಿಹಾಸ ಸಿಗದೇ ಇರುವುದು ದೊಡ್ಡ ದುರಂತವಾಗಿದೆ ಎಂದರು.

ರಾಜ್ಯದ ಕೃಷಿಕ ವರ್ಗ ಹಾಗೂ ಅತಿ ಹೆಚ್ಚು ಪಶು ಸಂಗೋಪನೆ ಮಾಡುವ ಹೆಚ್ಚಿನ ಪ್ರದೇಶಗಳಲ್ಲಿ ಕಲ್ಲೇಶ್ವರನ ದೇವಸ್ಥಾನಗಳು ನಿರ್ಮಾಣವಾಗಿವೆ ಅದರಂತೆ ಬಾಗಳಿಯ ಕಲ್ಲೇಶ್ವರ ದೇವಸ್ಥಾನ ತುಂಬಾ ಸುಂದರ ದೇವಸ್ಥಾನವಾಗಿದ್ದು, ಅದರ ಇತಿಹಾಸ ತಿಳಿದುಕೊಂಡರೆ ಉಳಿದ ದೇವಸ್ಥಾನಗಳ ಇತಿಹಾಸ ತಿಳಿದುಕೊಳ್ಳಲು ಸುಲಭವಾಗುತ್ತದೆ ಎಂದರು. ಹರಪನಹಳ್ಳಿ ಪಾಳೇಗಾರರು 230 ವರ್ಷಗಳ ಕಾಲ ಆಳ್ವಿಕೆ ಮಾಡುವ ಮೂಲಕ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಆದರೆ ಇಲ್ಲಿ ಕೋಟೆ ಸೇರಿದಂತೆ, ರಾಜರ ಇತಿಹಾಸ ಉಳಿದಿಲ್ಲ ಎಂದು ಎಲಿಗಾರ್ ನುಡಿದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚಂಗೆಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪರಿಚಯಿಸಲು ದತ್ತಿ ಕಾರ್ಯಕ್ರಮಗಳನ್ನು ದತ್ತಿ ದಾನಿಗಳ ಆಶಯದಂತೆ ಮಾಡಲಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ ದತ್ತಿಗಳನ್ನು ಹೆಚ್ಚು ಹೆಚ್ಚು ನೀಡುವ ಮೂಲಕ ಮತ್ತಷ್ಟು ಕನ್ನಡ ಸಾಹಿತ್ಯ ಪರಿಷತ್ತನ್ನು ಬಲಗೊಳಿಸಲಾಗುತ್ತದೆ ಎಂದರು.

ಬಿ.ಎಸ್.ಎನ್.ಎಲ್. ನಿವೃತ್ತ ಮಾರುಕಟ್ಟೆ ವ್ಯವಸ್ಥಾಪಕ ಕೆ.ಆರ್. ಸುಧಾಕರ ಅವರು ಪರಿಸರ ರಕ್ಷಣೆ ಬಗ್ಗೆ ಉಪನ್ಯಾಸ ನೀಡಿದರು.

ಮುಖ್ಯೋಪಾಧ್ಯಾಯ ಹೆಚ್.ಕೆ. ಚಂದ್ರಪ್ಪ, ಕಸಾಪ ಗೌರವ ಕಾರ್ಯದರ್ಶಿ ಜಿ.ಮಹಾದೇವಪ್ಪ, ಗೌರವ ಕೋಶಾಧಿಕಾರಿ ಕೆ.ರಾಘವೇಂದ್ರ ಶೆಟ್ಟಿ, ಸದಸ್ಯ ಪಿ. ಕರಿಬಸಪ್ಪ ಎಸ್.ಡಿ.ಎಂ.ಸಿ. ಅಧ್ಯಕ್ಷ ಶೀಲಾನಾಯ್ಕ, ಶಿಕ್ಷಕರುಗಳಾದ ರೇವಣಸಿದ್ದಪ್ಪ, ದಾದಾ ಸಲಾಂ, ಪರ್ವೀನಬಾನು, ಮಲ್ಲಮ್ಮ, ಅನಿತಾ, ಸಂತೋಷ, ಪುಷ್ಪಾ, ಪ್ರಿಯಾಂಕ, ನಾಗರಾಜ, ಮಂಜುನಾಥ, ಷಣ್ಮುಖ, ನೂರ್ ಜಹಾನ್ ಸೇರಿದಂತೆ ಇತರರು ಇದ್ದರು.

# ಕಾನೂನು ದುರ್ಬಳಕೆ : ಗಂಡನ ವಿರುದ್ಧದ ಅತ್ಯಾಚಾರ ಪ್ರಕರಣಕ್ಕೆ ಕೋರ್ಟ್ ತಡೆ

ಬೆಂಗಳೂರು, ಜೂ.10 – ಮದುವೆಯ ಮೊದಲೇ ದಿನವೇ ವಿರಸ ಉಂಟಾಗಿ, ಗಂಡನಿಂದ ದೂರವಾಗಿದ್ದ ಪತ್ನಿಯು, ಗಂಡನ ವಿರುದ್ಧ ದಾಖಲಿಸಿದ್ದ ಅತ್ಯಾಚಾರ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆಯಾಜ್ಞೆ ಹೊರಡಿಸಿದೆ.

ಗಂಡ ಹಾಗೂ ಕುಟುಂಬದ ಸದಸ್ಯರ ವಿರುದ್ಧ ಮಹಿಳೆ ದಾಖಲಿಸಿದ್ದ ಅತ್ಯಾಚಾರ ಮತ್ತಿತರೆ ಆರೋಪಗಳು ಕಾನೂನಿನ ದುರ್ಬಳಕೆ ಎಂದು ಹೈಕೋರ್ಟ್ ತಿಳಿಸಿದೆ.

ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯ ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಪ್ರೀತಿಸಿ ಮದುವೆಯಾಗಿದ್ದರು. ಜನವರಿ 27, 2023ರಂದು ಅವರು ದೇವಾಲಯದಲ್ಲಿ ಮದುವೆಯಾಗಿದ್ದರು. ನಂತರ ಮಲ್ಲೇಶ್ವರಂನಲ್ಲಿ ರಿಜಿಸ್ಟ್ರಾರ್ ಎದುರು ಮದುವೆ ನೋಂದಣಿ ಮಾಡಿಸಿಕೊಂಡಿದ್ದರು. ಆದರೆ, ಪತ್ನಿ ಇನ್ನೊಬ್ಬ ವ್ಯಕ್ತಿಯ ಜೊತೆ ಮೊದಲು ಸಂಬಂಧ ಹೊಂದಿದ್ದು ಹಾಗೂ ನಂತರದಲ್ಲೂ ವಾಟ್ಸಾಪ್ ಮೂಲಕ ಸಂಪರ್ಕದಲ್ಲಿರುವುದು ಕಂಡು ಬಂತು ಎಂದು ಪತಿ ಆರೋಪಿಸಿದರು. ಈ ಬಗ್ಗೆ ಉಭಯರ ನಡುವೆ ಜಗಳವಾಯಿತು. ಜನವರಿ 29ರಂದು ಮಹಿಳೆ ಗಂಡನ ಮನೆಯಿಂದ ಹೊರ ಹೋಗಿದ್ದರು.

ನಂತರದ 32 ದಿನಗಳ ಕಾಲ ಉಭಯರ ಸಂಪರ್ಕ ಇರಲಿಲ್ಲ. ಆನಂತರದಲ್ಲಿ ಮಹಿಳೆ ಪೊಲೀಸ್ ಠಾಣೆಗೆ ತೆರಳಿ ಗಂಡನ ವಿರುದ್ಧ ಅತ್ಯಾಚಾರದ ದೂರು ದಾಖಲಿಸಿದ್ದರು.

ಮದುವೆಯ ದಿನ ಏನಾಯಿತೋ ಗೊತ್ತಿಲ್ಲ. ನಾನು ಮತ್ತು ಬಂದ ಸ್ಥಿತಿಯಲ್ಲಿದ್ದೆ. ಮದುವೆಯ ನೋಂದಣಿ ಬಗ್ಗೆಯೂ ನೆನಪಿಲ್ಲ. ನನ್ನ ಹಳೆಯ ಸಂಬಂಧದ ಬಗ್ಗೆ ಗೊತ್ತಾಗಿ ಪೀಡಿಸಲಾಗಿದೆ. ನಾನು ಮದುವೆಯಾಗಿದ್ದರೂ ಸಹ, ಲೈಂಗಿಕ ಸಂಬಂಧ ನಡೆಸಿದ್ದು ಅತ್ಯಾಚಾರ ಎಂದು ಮಹಿಳೆ ದೂರಿದ್ದರು.

ಮಹಿಳೆ ದೂರನ್ನು ಪ್ರಶ್ನಿಸಿ ಗಂಡ ಹಾಗೂ ಮನೆಯವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಈ ಬಗ್ಗೆ ವಿಚಾರಣೆ ನಡೆಸಿದ ಹೈಕೋರ್ಟ್, ಉಭಯರು ಕೆಲ ವರ್ಷಗಳಿಂದ ಸಂಬಂಧ ಹೊಂದಿದ್ದರು. ಮದುವೆಯಾದ ಕೆಲ ದಿನಗಳ ನಂತರ ಅತ್ಯಾಚಾರದ ಆರೋಪ ಮಾಡಲಾಗಿದೆ. ಇದರ ಜೊತೆಗೆ, ಇಡೀ ಕುಟುಂಬದವರನ್ನು ಪ್ರಕರಣಕ್ಕೆ ಎಳೆದು ತರಲಾಗಿದೆ ಎಂದು ತಿಳಿಸಿದೆ.

ಮಧ್ಯಂತರ ಆದೇಶ ಹೊರಡಿಸಿರುವ ಹೈಕೋರ್ಟ್, ಗಂಡನ ಮನೆಯವರು ದಾಖಲಿಸಿರುವ ಅರ್ಜಿಯ ವಿಚರಣೆ ಪೂರ್ಣಗೊಳ್ಳುವವರೆಗೆ ಪ್ರಕರಣದ ಬಗ್ಗೆ ಯಾವುದೇ ವಿಚಾರಣೆ ನಡೆಸದಂತೆ ತಿಳಿಸಿದೆ.

# ಮಹಿಳೆಯರ ಹಾಸ್ಟೆಲ್ ಪ್ರವೇಶ ಪ್ರಾರಂಭ

ದಾವಣಗೆರೆ, ಜೂ.10- ಸ್ಥಳೀಯ ಸರಸ್ವತಿ ನಗರದಲ್ಲಿರುವ ಬಸವ ಮಹಾಮನೆಯಿಂದ 2023-24ನೇ ಸಾಲಿನ ಬಸವ ಬಳಗ ಪ್ರಸಾದ ಮತ್ತು ವಸತಿ ನಿಲಯ ವಿದ್ಯಾರ್ಥಿನಿ ಯರ ಪ್ರಸಾದ ನಿಲಯ (ಹಾಸ್ಟೆಲ್) ಪ್ರಾರಂಭ ವಾಗಿದೆ. ಆಸಕ್ತ ವಿದ್ಯಾರ್ಥಿನಿ ಯರು ವಿವರಗಳಿಗೆ 7337737884, 9880555916 ಸಂಖ್ಯೆಗಳಿಗೆ ಸಂಪರ್ಕಿಸಲು ವಾರ್ಡನ್ ಪಿ.ಎಂ. ಮಹಾರುದ್ರ ತಿಳಿಸಿದ್ದಾರೆ.

# ಅಖಿಲ ಭಾರತ ವೀರಶೈವ - ಲಿಂಗಾಯತ ಸಮಾಜದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಜೂ.10- ಅಖಿಲ ಭಾರತ ವೀರ ಶೈವ - ಲಿಂಗಾಯತ ಮಹಾಸಭಾದಿಂದ 2022-23ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿ, ಪುರಸ್ಕರಿಸಲಾಗುವುದು ಎಂದು ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ. ಪ್ರತಿಭಾವಂತ ವಿದ್ಯಾರ್ಥಿಗಳು ಸ್ವ-ವಿವರಗಳೊಂದಿಗೆ (ಇತ್ತೀಚಿನ ಒಂದು ಭಾವಚಿತ್ರ, ದೃಢೀಕರಿಸಿದ ಅಂಕಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರ) ಅರ್ಜಿಯನ್ನು ಮಹಾಸಭಾದ www.veerashaivamhasabha.in ವೈಬ್‌ಸೈಟಿನಲ್ಲಿ ಆನ್‌ಲೈನ್ ಮೂಲಕ ಇಂದಿನಿಂದ ಇದೇ ದಿನಾಂಕ 25 ರೊಳಗೆ ಸಲ್ಲಿಸುವುದು. ಆನ್‌ಲೈನ್ ಮೂಲಕ ಬಂದ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುವುದು. ಅಂಚೆ, ಕೋರಿಯರ್ ಅಥವಾ ಖುದ್ದಾಗಿ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಅಖಿಲ ಭಾರತ ವೀರಶೈವ - ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ವಿವರಿಸಿದ್ದಾರೆ.

# ಮಾಗನೂರು ಬಸಪ್ಪ ಕಾಲೇಜಿನ ಪ್ರಥಮ್ ಕಾಮೆಡ್-ಕೆ ಪರೀಕ್ಷೆಯಲ್ಲಿ 784 ನೇ ರ್‍ಯಾಂಕ್





ದಾವಣಗೆರೆ, ಜೂ.10- ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕಾಗಿ ನಡೆಸುವ ರಾಷ್ಟ್ರಮಟ್ಟದ ಕಾಮೆಡ್-ಕೆ ಪರೀಕ್ಷೆಯಲ್ಲಿ ನಗರದ ಮಾಗನೂರು ಬಸಪ್ಪ ಪಿಯು ಕಾಲೇಜಿನ ಪ್ರಥಮ್ ಪಿ. ಪಾಲಂಕರ್ 784 ನೇ ರ್‍ಯಾಂಕ್ ಪಡೆಯುವುದರ ಮೂಲಕ ಜಿಲ್ಲೆಗೇ ಪ್ರಥಮ ಸ್ಥಾನ ಪಡೆದಿರುತ್ತಾನೆ ಹಾಗೂ ರುದ್ರೇಶ್ ಎಮ್.ಎಸ್. 951 ನೇ ರ್‍ಯಾಂಕ್ ಪಡೆದಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಸಂಗಮೇಶ್ವರ ಗೌಡರು, ನಿರ್ದೇಶಕ ಡಾ.ಜಿ.ಎನ್. ಹೆಚ್.ಕುಮಾರ್, ಪ್ರಾಚಾರ್ಯ ಡಾ.ಪ್ರಸಾದ್ ಬಂಗೇರ ಎಸ್. ಅಭಿನಂದಿಸಿದ್ದಾರೆ.

# ಶ್ರೀಶೈಲ ಶ್ರೀ ನೇತೃತ್ವದಲ್ಲಿ ವಟುಗಳಿಗೆ ಶಿವದೀಕ್ಷೆ



ದಾವಣಗೆರೆ, ಜೂ. 10- ಇತ್ತೀಚೆಗೆ ನಗರದಲ್ಲಿ ಜಂಗಮ ವಟುಗಳಿಗೆ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಶ್ರೀ ಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಶಿಬಿರ ಉದ್ಘಾಟಿಸಿ ಶುಭ ಹಾರೈಸಿದ್ದರು.

ಶಿಬಿರದ ಕೊನೆ ದಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮಣಕೂರು ಮತ್ತು ಶ್ರೀ ಈಶ್ವರ ಪಂಡಿತಾರಾಧ್ಯ ಸ್ವಾಮಿಗಳ ನೇತೃತ್ವದಲ್ಲಿ ಜಂಗಮ ವಟುಗಳಿಗೆ ಶಿವದೀಕ್ಷಾ ಕಾರ್ಯಕ್ರಮ ನೆರವೇರಿತು. ಸರ್ವಶ್ರೀ ಪರಮೇಶ್ವರ ಶಾಸ್ತ್ರಿಗಳು, ಮುತ್ತಯ್ಯ ಶಾಸ್ತ್ರಿಗಳು ಕಾನಳ್ಳಿ ಮಠ ಸಿದ್ದಾಪುರ, ಡಿ.ಎಂ. ಹಾಲಸ್ವಾಮಿ, ಕೆ.ಎಂ.ಪರಮೇಶ್ವರಯ್ಯ, ಕೆ.ಎಂ.ಚನ್ನಬಸವಯ್ಯ, ಶಿವಕುಮಾರ ಶಾಸ್ತ್ರಿಗಳು, ಶಂಭುಲಿಂಗ ಶಾಸ್ತ್ರಿಗಳು, ಮೇಘಬ್ಬಿ ಶಾಸ್ತ್ರಿಗಳು, ಶಂಭುಲಿಂಗ ಶಾಸ್ತ್ರಿಗಳು, ಕಾಶೀನಾಥ ಶಾಸ್ತ್ರಿಗಳು, ಬನ್ನಯ್ಯ ಸ್ವಾಮಿ, ನಾಗಯ್ಯ ಸ್ವಾಮಿ ಉಪಸ್ಥಿತರಿದ್ದರು. ಮಠದ ವಿದ್ಯಾರ್ಥಿ ಅಂಬರೀಶ ನಿರೂಪಿಸಿದರು.

# 'ಜನತಾವಾಣಿ' ಉದ್ಯೋಗಿ ಡ್ಯಾನಿಯಲ್ ಅವರಿಗೆ ಶ್ರದ್ಧಾಂಜಲಿ



ದಾವಣಗೆರೆ, ಜು. 10- 'ಜನತಾವಾಣಿ' ಉದ್ಯೋಗಿ ಜಾನ್ ಡ್ಯಾನಿಯಲ್ ಅವರು ಈಚೆಗೆ ನಿಧನರಾಗಿದ್ದು, ಮೃತರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಇಲ್ಲಿನ ಕೆ.ಆರ್. ಮಾರುಕಟ್ಟೆ ರಸ್ತೆಯಲ್ಲಿರುವ ಸಿಎಸ್‌ಐ ಜಿಯೋನ್ ಚರ್ಚ್‌ನಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

'ಜನತಾವಾಣಿ' ಸಂಪಾದಕ ಎಂ.ಎಸ್. ವಿಕಾಸ್, ಶ್ರೀಮತಿ ಜಯಶೀಲ ಹೆಚ್.ಎನ್. ಷಡಾಕ್ಷರಪ್ಪ, ವಿಕಾಸ್ ಅವರ ಪುತ್ರ ಚಿ. ಜಯಧರ, ಪುತ್ರಿ ಕು. ಪ್ರೇರಣ, ಉಪ ಸಂಪಾದಕ ಇ.ಎಂ. ಮಂಜುನಾಥ ಹಾಗೂ ಸಿಬ್ಬಂದಿಗಳು ಡ್ಯಾನಿಯಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಚರ್ಚ್‌ನ ರೆವ. ಅನಿಲ್ ಕುಮಾರ್ ಸಿ.ನಿಲ್‌ಗಲ್, ಬಾತಿ ಚರ್ಚ್‌ನ ಬಾಬು ಪಾಲ್ವರ್, ಹರಿಹರ ಚರ್ಚ್‌ನ ಪಾಸ್ಟರ್ ಇಮ್ಮಾನುವೇಲ್ ಸುರಣಗಿ, ಸಭಾಪಾಲನ ಸಮಿತಿ ಸದಸ್ಯರುಗಳಾದ ನಿತಿನ್ ಗ್ಲಾಡ್‌ಸನ್, ಬುನಿಯನ್ ಸುಮಿತ್ರ, ನವೀನ್ ಕುಮಾರ್, ಗೀತಾ ಲಾರೆನ್ಸ್, ಚಿದಾನಂದ್, ಅರುಣ್ ಕುಮಾರ್, ನ್ಯೂಟಿನ್ ಬ್ರದರ್, ದಿ. ಡ್ಯಾನಿಯಲ್ ಅವರ ಪತ್ನಿ ಶ್ರೀಮತಿ ಹೆಲನ್ ಗ್ರೇಸ್, ಪುತ್ರ ಎಲಿಷ ಸ್ಯಾಮ್ಯುಲ್, ಪುತ್ರಿ ಜೆನ್ನಿ ಕ್ಯಾರೋಲಿನ್ ಸೇರಿದಂತೆ ಡ್ಯಾನಿಯಲ್ ಅವರ ಸ್ನೇಹಿತರು, ಬಂಧುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



॥ ಶ್ರೀ ವೀತರಾಗಾಯ ನಮಃ॥
ಆತ್ಮಶಾಂತಿ ಪೂಜಾ ಆಹ್ವಾನ
ದಾವಣಗೆರೆ ಸಿಟಿ ಆನೆಕೊಂಡ ಪೇಟೆ ವಾಸಿ
ಶ್ರೀಮತಿ ಸುಮಂಗಲ ಮಳಲಿ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 28.05.2023ನೇ ಭಾನುವಾರ ಬೆಳಿಗ್ಗೆ 6.30ಕ್ಕೆ
ನನ್ನ ಪೂಜ್ಯ ಪತಿಯವರಾದ
ದಿ॥ ಶ್ರೀ ಸುಭಾಷ್ ಜಯಪ್ಪ ಮಳಲಿ
ಇವರು ಜಿನೈಕ್ಯರಾದ ಪ್ರಯುಕ್ತ 'ಮೃತರ ಆತ್ಮಶಾಂತಿಗಾಗಿ' ದಾವಣಗೆರೆ ನಗರದ ನರಸರಾಜ ರಸ್ತೆಯ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಜಿನಮಂದಿರದಲ್ಲಿ ದಿನಾಂಕ : 11.06.2023ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ನವಕಳಸಗಳಿಂದ ಅಭಿಷೇಕ ಹಾಗೂ ತರ್ಪಣ ನಂತರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಸಿಟಿ ಆನೆಕೊಂಡಪೇಟೆಯಲ್ಲಿ ಸಂಘ ಸಂತರ್ಪಣೆಯನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ಆದ್ದರಿಂದ ತಾವುಗಳು ಆಗುಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಸುಮಂಗಲ ಮಳಲಿ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು, ಫೋ. : 8892908821

ಮೋತಿಸ್ ಫುಡ್ ಪ್ಯಾರಡೈಸ್
ಗಾಂಧಿ ಸರ್ಕಲ್ ಬಳಿ, ಪಿ.ಬಿ.ರಸ್ತೆ, ದಾವಣಗೆರೆ
ಹೊಸತನದ ಶುಭಾರಂಭ
ಉತ್ಕೃಷ್ಟ ದರ್ಜೆಯ
ಚೈನೀಸ್ ಫುಡ್, ಚಾಟ್ಸ್, ಜ್ಯೂಸ್ ಹಾಗೂ
ಐಸ್‌ಕ್ರೀಮ್ ದೊರೆಯುತ್ತವೆ.
ಸಾಂಪ್ರದಾಯಿಕ ಶುಚಿ-ರುಚಿ
ಆಧುನಿಕ ಅಭಿರುಚಿ
ಎಲ್ಲರಿಗೂ ಪ್ರೀತಿ, ನಾಡಿನಲ್ಲಿ ಖ್ಯಾತಿ, ಆದುವೆ ಬ್ರಾಂಡ್ ಮೋತಿ
ದಿನಾಂಕ : 14.6.2023 ಬುಧವಾರದಿಂದ
ನಿತ್ಯ ಬೆಳಿಗ್ಗೆ 11 ರಿಂದ ರಾತ್ರಿ 10ರ ತನಕ.
ನಿರಂತರ ಸೇವೆ

ಐದನೇ ವರ್ಷದ ಪುಣ್ಯಸ್ಮರಣೆ

ಜನನ : 08-01-1993
ಮರಣ : 11-06-2018
ದಿ।। ಶರಣೆ ಸ್ಮಿತಾ ಬಿ. ಪಾಟೀಲ್ (ಪಾಪು)
(ಎನ್. ಪವನ್‌ಕುಮಾರ್ ಗುಬ್ಬಿ ಹದಡಿ ಇವರ ಧರ್ಮಪತ್ನಿ)
ದೇವರು ನಿನ್ನ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ.
ನಿನ್ನ ನೆನಪು ಸದಾ ಹಚ್ಚ ಹಸಿರಾಗಿದೆ. ಸದಾ ನಿನ್ನ ಸ್ಮರಣೆಯಲ್ಲಿ ಇರುವ
ತಂದೆ-ತಾಯಿ : ಬಸವನಗೌಡ ಪಾಟೀಲ್, ಎಸ್. ಮಂಜುಳ, ಶಿಕ್ಷಕರು
ಅಕ್ಕ-ಮಾವ : ಶ್ವೇತ, ಬಸನಗೌಡ ಗೌಡ್ರು, ಶಿಕ್ಷಕರು
ಚಿ॥ ಚಿನ್ಮಯಿ, ಚಿ॥ ಯಶಸ್, ಚಿ॥ ಚಿರಂತ್
ಹಾಗೂ ಬಂಧು-ಮಿತ್ರರು. ಮೊ. 8747937296, 9591426360

ಸೂರಿ ಮಿಲ್ಟ್ರಿ ಹೋಟೆಲ್ ನಾಟಿ ಸ್ಟೈಲ್
SURI Military Hotel Nati Style
ಫ್ಯಾಮಿಲಿ ರೆಸ್ಟೋರೆಂಟ್

ಮಡಿಕೆ ಚಿಕನ್, ಮಡಿಕೆ ಮಟನ್ ಹಾಗೂ ಮಡಿಕೆ ಬಿರಿಯಾನಿ ದೊರೆಯುತ್ತದೆ.
ಸಸ್ಯಹಾರಿ ಮತ್ತು ಮಾಂಸಹಾರಿ
ಸಮಯ : ಬೆಳಿಗ್ಗೆ 12 ರಿಂದ ರಾತ್ರಿ 11ರವರೆಗೆ
Main Branch 1 : Bada Cross, Davanagere.
Main Branch 2 : Near HDFC Bank, Bapuji Boys Hostel Road, Davanagere
ಮೊ : 99023 80436 / 94805 13787



